# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XX - 11 ನವೆಂಬರ್ 2002

### ಈ ಸಂಚಿಕೆಯಲ್ಲಿ

| | | |
|---|---|---|
| ಬಿ. ಜಯಶ್ರೀಯವರೊಂದಿಗೆ ಸಂದರ್ಶನ | • ಭವಾನಿ | 2 |
| ಭಾರತೀಯ ಕಲೆ - ಭಾಗ 9<br>ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ | | 6 |
| ಕೈಲಾಸಂ ಸ್ಮರಣೆ | • ಬಿ. ನಾಗಭೂಷಣ್ | 8 |
| ಕವನ<br>ಕಾಲದ ಹಿರಿಮೆ | • ಮೇಧಾ ಎಮ್. ಕುಲಕರ್ಣಿ | 9 |
| ಶತಾಯುಷಿ ಜಸ್ಟೀಸ್ ನಿಟ್ಟೂರು ಶ್ರೀನಿವಾಸ ರಾವ್ ನಾ ಕಂಡಂತೆ | • ಲೀಲಾ ಡೋಯಿಸ್ | 10 |
| Birth Centenary of Shri H.V.R.Iengar Celebrated at Bangalore | • T.S Champaknath | 11 |
| ಕಾರಂತ ಚಿಂತನ - 4 | • ಡಾ. ಜಿ.ಎನ್. ಉಪಾಧ್ಯ | 12 |
| Concerts on the first Friday of every month | | 14 |
| ಸುತ್ತ-ಮುತ್ತ | | 14 |
| Forthcoming programmes | | 16 |

**The Mysore Association, Mumbai**
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಬಿ. ಜಯಶ್ರೀಯವರೊಂದಿಗೆ ಸಂದರ್ಶನ

ಅಕ್ಟೋಬರ್ 11ರಂದು ಮೈಸೂರು ಅಸೋಸಿಯೇಶನ್ನಿನಲ್ಲಿ ಶ್ರೀಮತಿ ಬಿ. ಜಯಶ್ರೀ ಅವರ 'ಬಣ್ಣದ ಬದುಕಿನ ಚಿನ್ನದ ಹಾಡುಗಳು' ಎಂಬ ಒಂದು ಕಾರ್ಯಕ್ರಮವಿತ್ತು. ಗುಬ್ಬಿ ವೀರಣ್ಣ ಕಂಪೆನಿ ಕಳೆದ ಒಂದು ನೂರು ವರ್ಷದಲ್ಲಿ ನಡೆದು ಬಂದು ಕೆಲವು ಮೈಲಿಗಲ್ಲುಗಳನ್ನು ಆಧರಿಸಿ ಒಂದು ಸ್ಲೈಡ್ ಶೋ ಜೊತೆಗೆ ಜಯಶ್ರೀಯವರು ಕಾರ್ಯಕ್ರಮವನ್ನು ನಿರೂಪಿಸಿದರು.

ಸರಿ. ನಮ್ಮ 'ನೇಸರು' ಸಂಪಾದಕರು ಕಾರ್ಯಕ್ರಮಕ್ಕೆ ನಾಲ್ಕೈದು ದಿನವಿರುವಾಗಲೇ ನನ್ನನ್ನು ಕರೆದು ಜಯಶ್ರೀಯವರ ಸಂದರ್ಶನ ಮಾಡಿ ಬರೆಯಬೇಕು ಅಂದರು. ನಾನೂ ಅವರಿಗೆ ಆಗದು ಅಂತ ಹೇಳಲಾಗದೆ ಸರಿ ಅಂತ ಒಪ್ಪಿಕೊಂಡೆ. ಆದರೆ ಒಳಗೇ ಒಂದು ಥರ ಪುಕ್ಕಲು. ಇಷ್ಟು ದೊಡ್ಡ, ಹೆಸರಾಂತ ಕಲಾವಿದೆಯನ್ನು ಹೇಗಪ್ಪಾ ಮಾತಾಡಿಸೋದು? ಏನಾದ್ರೂ ಅಭಾಸವಾದ್ರೆ ಅಂತ ಭಯ. ಆದರೆ ನನ್ನ ಅದೃಷ್ಟಕ್ಕೆ ಜಯಶ್ರೀಯವರು ಅಸೋಸಿಯೇಶನ್‌ಗೇ ಬಂದು ಸಂದರ್ಶನ ಕೊಡಲು ಒಪ್ಪಿಕೊಂಡರು. ಸರಿ, ಹೇಗೂ ಇಲ್ಲಿ ನಮ್ಮ ಸಂಭಾಷಣೆಯನ್ನು Tape ಮಾಡಿಕೊಳ್ಳಬಹುದಲ್ಲ ಅನ್ನಿಸಿ ನಮ್ಮ ಶಾಂಕೇಶ್ ನ ಕೇಳಿದೆ. 'ಏನಪ್ಪಾ ವ್ಯವಸ್ಥೆ ಮಾಡ್ತೀಯಾಂತ', 'ಅದಕ್ಕೇನು ಮೇಡಂ, ಎಲ್ಲಾ ರೆಡಿ ಇದೆಯಲ್ಲ, ಕಂಟ್ರೋಲ್ ರೂಂ ನಲ್ಲೇ ತಗೊಳ್ಳಿ ನಿಮ್ಮ ಸಂದರ್ಶನ, ನಾನು ಸ್ವಿಚ್ ಹಾಕಿ ಬಿಟ್ಟರೆ ಆಯ್ತು'' ಅಂತಂದ ನಮ್ಮ ಶಾಂಕೇಶ್. ಜಯಶ್ರೀ, ಆನಂದ ರಾಜು, ಅವರ ನೆಂಟರೂ, ಶಾಂಕೇಶ್‌ನೂ, ನಾನೂ ಸೇರಿದಂತೆ ನಾವು ಐದು ಜನವೂ ಕಂಟ್ರೋಲ್ ರೂಂ ಸೇರಿಕೊಂಡೆವು. ಆದರೂ ನನಗೆ ಹೇಗೆ ಇದನ್ನು ನಿರ್ವಹಿಸೋದು ಅಂತ ಯೋಚನೆಯಾಗಿತ್ತು. ಲಿಫ್ಟ್‌ನಲ್ಲಿ ಮೇಲೆ ಹೋಗುವಾಗಲೇ ನಾನು ಅವರಿಗೆ ಒಂದು ಹಿಂಟ್ ಕೊಟ್ಟಿದ್ದೆ. ನನಗೆ ಅವರ ಅಮೆರಿಕಾ ಪ್ರವಾಸದ ಅನುಭವದ ವಿವರ ಬೇಕು ಅಂತ. ಅದನ್ನೇ ಎಳೆಯಾಗಿಟ್ಟುಕೊಂಡು, ನಾನು ಕೇಳಬೇಕು ಅಂದು ಕೊಳ್ಳುವುದನ್ನೆಲ್ಲಾ ಅವರೇ ಊಹಿಸಿಕೊಂಡು ಜಯಶ್ರೀಯವರೂ, ಆನಂದವರೂ ಸಾಕಷ್ಟು ವಿಷಯಗಳನ್ನು ತಿಳಿಸಿದರು. ತಿಳಿಸಿದರು. ಒಂದು ರೀತಿಯಲ್ಲಿ ಅವರೇ ಸಂದರ್ಶನವನ್ನು ನಡೆಸಿಕೊಟ್ಟು ನನ್ನನ್ನು ಉಳಿಸಿದರು ಅನ್ನಬೇಕು. ಅವರಿಗೆ ಎಷ್ಟು Thanks ಹೇಳಿದರೂ ಸಾಲದು. ಸಂದಶನವೇನೋ Tape ಆಯ್ತು. ಇದನ್ನು ಕಾಗದದ ಮೇಲೆ ಹೇಗಪ್ಪಾ ಮೂಡಿಸಲಿ ಅನ್ನಿಸಿತು. ಪುನಃ ಸಂಪಾದಕರ ಮೊರೆ ಹೊಕ್ಕೆ. 'ರೆಕಾರ್ಡ್ ಆಗಿರುವುದನ್ನು ಆಧಾರವಾಗಿಟ್ಟುಕೊಂಡು ಬರಿ, ಸಂಭಾಷಣೆ ರೂಪದಲ್ಲೇ ಬರಬೇಕು ಅನ್ನುವುದೇನೂ ಇಲ್ಲ' ಎಂದರು. ಆದರೆ ಟೇಪ್‌ನಲ್ಲಿ ರೆಕಾರ್ಡ್ ಆದದನ್ನು ಕೇಳ್ತಾ ಕೇಳ್ತಾ ಇದು ಹೀಗೆ ಇದ್ದರೆ ಚೆಂದ. ಅನ್ನಿಸ್ತು. ಹೀಗಾಗಿ ಜಯಶ್ರೀಯವರ ಮತ್ತು ಆನಂದ ಅವರ ಆ ಮಾತಿನ ಸೊಗಸನ್ನು ಅಕ್ಷರ ರೂಪದಲ್ಲಿ ಕೊಡಲು ಪ್ರಯತ್ನಪಟ್ಟಿದ್ದೀನಿ. ನಾಟಕದ ಬಗ್ಗೆ ಅವರ ಆಸಕ್ತಿ, ಕಳಕಳಿ ಹಾಗೂ ಉತ್ಸುಕತೆಯನ್ನು ಓದುಗರು ಗ್ರಹಿಸಿ ಅವರ ಆಸೆಯನ್ನು ಪೂರೈಸಲು ಮನಸ್ಸು ಮಾಡುತ್ತಾರೆ. ಅಂದು ಕೊಂಡಿದ್ದೀನಿ.

ಇದೇ ಸಂದರ್ಭದಲ್ಲಿ ನೇಸರು ಮೈಸೂರು ಅಸೋಸಿಯೇಷನ್ ಪರವಾಗಿ ಜಯಶ್ರೀ ಅವರನ್ನೂ ರಾಜ್ಯೋತ್ಸವ ಪ್ರಶಸ್ತಿಗಾಗಿ ಹಾರ್ದಿಕವಾಗಿ ಅಭಿನಂದಿಸುತ್ತದೆ.

ಸಂದರ್ಶನ : ಭವಾನಿ



*ಕಾರ್ಯಕ್ರಮದ ಮುಂಚೆ ಜಯಶ್ರೀಯವರು ಸಭೆಯ ಪರವಾಗಿ ಕಾರಂತರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಿರುವುದು.*

*- ಅಮೆರಿಕದಲ್ಲಿ ಎಷ್ಟು ದಿವಸ ಇದ್ದೀರಿ*

ಜ: ಎರಡು ತಿಂಗಳು ಇದ್ದೆವು. ಪ್ರೊಡಕ್ಷನ್ ಮಾಡುವುದಕ್ಕೆ ಒಂದು ತಿಂಗಳು ಬೇಕಾಯಿತು (20 ದಿವಸ)

*- ಕರೆಸಿಕೊಂಡವರು ಯಾರು?*

ಜ: ICHS (Indian Cultural Heritage Foundation Society, Dallas) ಅವರಿಗೋಸ್ಕರ ಒಂದು ತಿಂಗಳು ಅಲ್ಲೇ ಇದ್ದು ನಾಟಕ ತಯಾರು ಮಾಡಿದ್ದೀರಾ! ಹೌದು, ಅವರ ಜನರಿಗೋಸ್ಕರ ಮಾಡಿದ್ದು. ಒಂದು ತಿಂಗಳಿಗೂ ಕಡಿಮೆ ಸಮಯ ಸಿಕ್ಕಿತು. ವಾರದಲ್ಲಿ 5 ದಿನ, ದಿನಕ್ಕೆ ಎರಡು ಗಂಟೆ ಅಷ್ಟೆ ಸಿಕ್ಕಿದ್ದು. ಆಗಸ್ಟ್ 10ಕ್ಕೆ ಶುರು ಮಾಡಿಕೊಂಡೆವು. ಸೆಪ್ಟೆಂಬರ್ 8ಕ್ಕೆ ಶೋ ಆಯ್ತು.

*-ಅಲ್ಲಿರುವ ಜನಗಳನ್ನೇ ತಗೊಂಡು ನಾಟಕ ನಿರ್ದೇಶಿಸಿ ಪ್ರದರ್ಶಿಸಿದಿರಾ?*

ಜ: ಹೌದು.

ನಾಟಕ ಇಂಗ್ಲೀಷ್‌ನಲ್ಲಿತ್ತಾ

ಜ: ಹೌದು

*- ನಾಟಕ ರಾಮಾನುಜಂ ಅವರು ಬರೆದದ್ದೇ ಅಲ್ವ ಅವರ ಲೇಖನವೇ?*

ಜ: ಅಲ್ಲ, ಅವರ ಕಿರು ಕತೆ, 'Flowering tree' ಅಂತ ಜನಪದ ಕತೆ.

*-ಅದನ್ನು ನಾಟಕಕ್ಕೆ ರೂಪಾಂತರಿಸಿದವರು ಯಾರು?*

ಜ: ಹೆಚ್.ಎಸ್. ವೆಂಕಟೇಶ ಮೂರ್ತಿ ಅಂತ ಕವಿಗಳು. ಅವರು ಅದನ್ನು ಕನ್ನಡದಲ್ಲಿ ನಾಟಕಕ್ಕೆ ರೂಪಾಂತರಿಸಿದರು. ಇಂಗ್ಲೀಷ್‌ಗೆ ತರ್ಜುಮೆ ಮಾಡಿದ್ದು ವಿಮಲಾ ರಂಗಾಚಾರ್. ಸಂಗೀತ ಸುಮತಿ ಅವರದ್ದು.

*- ಅಲ್ಲಿ ಇಂಗ್ಲೀಷ್‌ನಲ್ಲಿ ಮಾಡಿದ್ರಾ?*

ಜ: ಹೌದು, ಅಲ್ಲಿ ಇಂಗ್ಲಿಷ್‌ನಲ್ಲಿ ತಾನೆ ಮಾಡಬೇಕಾಗಿದ್ದು. ಹಾಡುಗಳೆಲ್ಲಾ (Poetry) ಇತ್ತಲ್ಲ, ಅದಕ್ಕೆ ಕನ್ನಡದಲ್ಲಿ ಬರೆದು ಬಿಟ್ಟರು ಅವರು ಅದನ್ನು Maintain ಮಾಡಿಕೊಂಡು ಬಂದರು.

*- ಸಂಭಾಷೆ ಎಲ್ಲಾ ಇಂಗ್ಲೀಷ್‌ನಲ್ಲಿ ಹಾಡೆಲ್ಲಾ ಕನ್ನಡದಲ್ಲಿತ್ತಾ?*

ಜ: ಹೌದು.

*- ಎಷ್ಟು ಜನರಿದ್ದರು ತಂಡದಲ್ಲಿ*

ಜ: ಒಂದು 15 ಜನ.

ಆ : ಒಟ್ಟು Back Stage ಎಲ್ಲಾ ಸೇರಿ 18 ಜನ

*- ಎಲ್ಲಾ ಇಂಡಿಯನ್ಸಾ?*

ಜ: ಹೂಂ, ಅಲ್ಲಿ ಹುಟ್ಟಿ ಬೆಳೆದವರು.

*-ಎಲ್ಲಾ ಕನ್ನಡದವರೇ?*

ಜ: ಕನ್ನಡದವರು 50% ಇದ್ದರು ಮಿಕ್ಕವರಲ್ಲಿ ಗುಜರಾತಿ, ತಮಿಳರು ಎಲ್ಲಾ ಇದ್ದರು. ಎಲ್ಲಾ ಅಲ್ಲೇ ಹುಟ್ಟಿ ಬೆಳೆದವರು, ಕನ್ನಡದವರಿಗೂ ಕನ್ನಡ ಬರುತ್ತಿರಲಿಲ್ಲ.

ಎಲ್ಲಾ ಮಕ್ಕಳೇನಾ (ಅಂದರೆ) ಚಿಕ್ಕ ಚಿಕ್ಕವಾ?

ಜ : ಮಕ್ಕಳೂಂದ್ರೆ 20 ವರ್ಷ ಇರಬಹುದು.

(But Young Genration)

*-ಅದು ಒಂದೇ ಶೋ ಆಗಿದ್ದಾ?*

ಜ: ಹೌದು ಒಂದು ಶೋ ಆಗಿದ್ದು. ಮತ್ತೇನೊ ಮಾರ್ಚ್‌ನಲ್ಲಿ ಕೇಳ್ತಾ ಇದ್ದಾರೆ. ಏನ್ ಮಾಡ್ತಾರೋ ಗೊತ್ತಿಲ್ಲ (Houstonನಲ್ಲಿ)

*- ಮತ್ತೆ ಈ ಸ್ಲೈಡ್ ಶೋ ತಯಾರಿ ಮಾಡಿಕೊಂಡು ಹೋಗಿದ್ದಿರಲ್ಲ, ಅದೂ ಯಾರಿಗೋಸ್ಕರ, ತಯಾರು ಮಾಡಿದಿರಿ?*

ಜ: ಅದು ನಮ್ಮ ಸ್ವಂತ ಶೋ.

*- ಅಲ್ಲೇ ಡಲ್ಲಾಸ್‌ನಲ್ಲೇ ಆಯ್ತಾ? ಬೇರೆ ಎಲ್ಲಿ ಮಾಡಿರಿ*

ಜ: ಡಲ್ಲಾಸ್‌ನಲ್ಲೂ ಆಯ್ತು, ಹೂಸ್ಟನ್‌ನಲ್ಲಿ ಆಯ್ತು, ಫೀನಿಕ್ಸ್‌ನಲ್ಲಿ, ಲಾಸ್‌ವೇಗಸ್‌ನಲ್ಲಿ, ನ್ಯೂ ಜೆರ್ಸಿ, ನ್ಯೂಯಾರ್ಕ್.

*- ೨೦ ದಿವಸ ಮೊದಲು ನೀವು ಆ ನಾಟಕ ನಿರ್ದೇಶಿಸಿ ಪ್ರಯೋಗ ಮಾಡಿದ ಮೇಲೆ ಸ್ಲೈಡ್ ಶೋ ಮಾಡಿದಿರಾ?*

ಜ : ಹೌದು, ನಾಟಕದ ತಯಾರಿ ನಡೆಯುತ್ತಿರುವಾಗಲೇ ನಾವು ಅಲ್ಲಿಗೆ ಬಂದಿರುವುದು ತಿಳಿಯುತಲ್ಲ. Invitations ಗಳು ಬಂದವು. ಮೊದಲು Jllionerzನಲ್ಲಿ, ಆಮೇಲೆ Houstonನಿಂದ Phoenix ಗೆ ಬಂದೆವು. ಅಲ್ಲಿ ಶೋ ಆಗ್ತಿದ್ದಾಗ ಸಾಕು ಹೊರಟು ಬಿಡೋಣ ಅಂದ್ಕೊಳ್ಳುವಾಗ



*ರೋಹಿಣಿ ಹಟ್ಟಂಗಡಿ ಮತ್ತು ಜಯದೇವ್ ಹಟ್ಟಂಗಡಿಯವರು ಬಿ. ಜಯಶ್ರೀಯವರಿಗೆ ಹೂ ಗುಚ್ಛ ನೀಡಿ ಗೌರವಿಸುತ್ತಿರುವುದು.*

New Yarkನಿಂದ ಬಂತು. ಅಲ್ಲಿಗೆ ಬಂದ ತಕ್ಷಣ New Jersyಯಿಂದ Invitation ಬಂತು. Dallas ನಲ್ಲಂತೂ ಇದ್ದೇ ಇತ್ತು, ಕರೆಸಿದೋರೇನೇ ಮಾಡ್ಬೇಕೂಂತ ಗಲಾಟೆ.

*- ಅವರು ನಿಮ್ಮನ್ನು ಆ ನಾಟಕಕ್ಕೋಸ್ಕರ ಕರೆಸಿದ್ದಿದ್ದಾ, ಅಥವಾ ಗುಬ್ಬಿ ವೀರಣ್ಣ, ನಾಟಕ ಕಂಪನಿಗೆ ವರ್ಷ ತುಂಬಿತು ಅಂತ ನೀವು ಅವತ್ತು ಹೇಳಿದಿರಲ್ಲಾ ಅದಕ್ಕಾಗಿ ಕರೆಸಿದ್ದಾ,*

ಜ : ಹೌದು. ನಾಟಕಕ್ಕೋಸ್ಕರವೇ ಹೇಗಿದ್ರೂ ಬರ್‍ತಾ ಇದೀರಾ, ಯಾಕೆ ಅದನ್ನು ಮಾಡಬಾರದು ಅಂತ suggestion ಕೊಟ್ಟವರು ಗಿರೀಶ್ (ಕಾರ್ನಾಡ್) ಅವರು. ಅದೂ ಹೋದ ವರ್ಷ. ಆ ಲಂಡನ್ ನಲ್ಲೂ ಮಾಡುವಿರಂತೆ ಅಂದಿದ್ದರು. ಅದಾಗಲಿಲ್ಲ.

*- ಹೋಗುವುದಕ್ಕಾಗಲಿಲ್ಲವೇ ?*

ಜ : ಹೋಗುವುದಕ್ಕಾಗಲಿಲ್ಲ ಅಲ್ಲ, ಅದಾಗಲಿಲ್ಲ. ಯಾಕೆಂದರೆ ಅವರು (100 pds fpr performers 70 pds for the techinician) ಇಷ್ಟು ಕೊಡ್ತೀವಿ, ಹೋಗೋದು, ಬರೋದು, ಇಳಕೊಳ್ಳೋದು, ಟ್ರಾನ್ಸ್‌ಪೋರ್ಟೇಶನ್ ಎಲ್ಲಾ ನಿಮ್ಮದೇ. ಅಂದ್ರು. ನಾವು 'Fine ' ಒಂದು ಕೋಳ ಆಗುತ್ತೆ, ಕನ್ನಡದ ಪ್ರಚಾರ ಮಾಡಿದ ಹಾಗಾಗುತ್ತೆ ಅಂತ ಅಕ್ಸೆಪ್ಟ್ ಮಾಡ್ಕೊಂಡ್ವಿ. ಇನ್ನೇನು ಹೋಗಿ Visa ತಗೋಬೇಕು ಅನ್ನೊ ಹೊತ್ತಿಗೆ ಒಂದು E-mail ಬಂತು. You have to bring your audiance ಅಂತ. (ನಿಮ್ಮ ಪ್ರೇಕ್ಷಕರನ್ನು ನೀವೇ ಕರೆತರಬೇಕು) Some how I don't like the title also 'ಅಂತಾನೂ ಬಂತು. ಬೆಂಗಳೂರಿನಲ್ಲಿದ್ದುಕೊಂಡು ಅಲ್ಲಿ Audience ನ (ಕೇಳಿ ಕೊಳ್ಳೋದು) ಬೇಡ ಅನ್ನಿಸಿತು. 'Not worth, Sorry' ಅಂದೆವು

*- ನಮ್ಮ ಆಡಿಯನ್ಸ್‌ಗೋಸ್ಕರ ಮಾಡೋದಾದ್ರೆ ನಾವು ಇಲ್ಲೇ ಮಾಡಬಹುದಲ್ಲಾ, ಅಲ್ಲಿಗ್ಯಾಕೆ ಹೋಗಬೇಕು!*

ಆ : ಬೆಂಗಳೂರಿನಿಂದ London ನಲ್ಲಿರೋ ಕನ್ನಡ ಸಂಘಗಳಿಗೆಲ್ಲಾ ಬರೆದು, ಅವರಿಗೆಲ್ಲಾ ತಿಳಿಸಿ, ಪ್ರೇಕ್ಷಕರನ್ನು ಕರೆಸಿಕೊಳ್ಳಿ ಅಂತ ಅವರ ಉದ್ದೇಶ.

- ಅದು ಅವರು ಮಾಡಬೇಕಾದ್ದು.

ಜ : ಹೌದು ಅವರೇ ಆಫೀಸಿನಿಂದ ಒಂದು ಮೇಲ್ ಮಾಡಿದ್ರೂ ಆಗಿರೋದು.

*- ಈ ಸ್ಲೈಡ್ Show ನೀವು ಗುಬ್ಬಿ ವೀರಣ್ಣನವರ ನಾಟಕ ಕಂಪನಿಯ ಶತಾಬ್ದಿಗೆಂದೇ ತಯಾರು ಮಾಡಿದ್ರ?*

ಜ : ಇಲ್ಲಮ್ಮ ಖಂಡಿತಾ ಇಲ್ಲ. ಅದು ಯಾವ್ಯಾವುದಕ್ಕೋ ಸ್ಪಂದಿಸಿ ಕೊನೆಗೆ ಆ ಶೋ ಆಯ್ತು. ಹೇಗಿದ್ರೂ ಬರ್‍ತಿದ್ದೀರಾ, One woman Show ಮಾಡೋ ಹಾಗಿದ್ರೆ ಮಾಡಿ ಅಂತ Dallasನಲ್ಲಿ ICHS ನೋಡೋದೇ ಸುಮ್ಮನೆ ಹೇಳಿದ್ರು, 'ಉರಿಯೋ ಉಯ್ಯಾಲೆ' ಇತ್ತಲ್ಲಾ, (ಏಕ ಪಾತ್ರಾಭಿನಯ) ಅದೇ ಮಾಡೋದು ಅಂತಲೇ ಇದ್ದಿದ್ದು, ಅದೇ ಸಮಯಕ್ಕೆ ಗಿರೀಶ್ ಕಾರ್ನಾಡ್ ಬೆಂಗಳೂರಿಗೆ ಬಂದಿದ್ದರಲ್ಲ, ಅವರು ಅದನ್ನು (ಉರಿಯೋ ಉಯ್ಯಾಲೆ) ಮಾಡಿದ್ರೆ ಕಷ್ಟ ಆಗತೆ ಬರೀ words ಇರೋದರಿಂದ ಜನಕ್ಕೆ ಫಾಲೋ ಮಾಡಕ್ಕೆ ಕಷ್ಟ ಆಗುತ್ತೆ, ಯಾಕೆ ಡಾನ್ಸ್ ಮೂಸಿಕ್, ಹಾಡುನಲ್ಲಿ ಇದ್ದಿದ್ದು. ನಿಮಗೆ ಮೂರೂ ಗೊತ್ತಿರೋದಿಂದ Why not you do it ! ಅಂತ ಅಂದ್ರು ಅದನ್ನು ಮಾಡಕ್ಕೆ ಇಂಗ್ಲೀಷ್‌ನಲ್ಲಿ ಮಾತಾಡ್ ಬೇಕಾಗುತ್ತೆ. That I don't like it ಇಂಗ್ಲೀಷ್ ನಾನು ಮಾತಾಡೋದು ನನಗೆ ಅಷ್ಟು ಇಷ್ಟಾ ಪಡಲ್ಲ. ಯಾಕೆಂದರೆ thats not my home. ನಾನ್ ಮಾತಾಡಲ್ಲ. ಬೇಕಾದ್ರೆ ಹಿಂದೀಲಿ ಆಗುತ್ತೆ. ಅಂದ್ರೆ ಅದಕ್ಕೆ ಇಲ್ಲ ಕನ್ನಡದಲ್ಲೇ ಮಾತಾಡಿ, But Music ಇರುತ್ತೆ ಆಕ್ಟಿಂಗ್, ಇರುತ್ತೆ. ಅಂದ್ರು. ಸರಿ ಹೆಂಗ್ ಮಾಡೋದು ಅಂತ ಕಪ್ಪಣ್ಣ, ಆನಂದ್, ಶಶಿಧರ್ ಭಾರಿಘಾಟ್ ಮೂರು ಜನ ತಲೆಕೊಡಿಸಿಕೊಂಡರು. ಏನ್ ಮಾಡ್ತೀರಾ?

ಸ್ವರ್ಣಮ್ಮಕ್ಕ, ಕಮಲಕ್ಕ, ಸುಂದ್ರಮ್ಮ ಅವರೆನ್ನೆಲ್ಲ ಕರಕೊಂಡು ಬರ್‍ತೀರಾ ? ಅಂತ ಕೇಳಿದ್ರು. ಅಜ್ಜಿ ದೊಡ್ಡಮ್ಮ, ಮತ್ತೆ ಅಮ್ಮ ಅವರೆಲ್ಲರ ಡ್ರೆಸ್ ಮಾಡ್ಕೊಂಡು ಆಕ್ಟಿಂಗ್ ಮಾಡಿದ್ದೆಲ್ಲಾ ಹೇಳ್ತಾ ಬರ್‍ತಿರಾ ಅಂತ ಕೇಳಿದ್ರು. ನನಗೆ ಮನಸ್ಸೊಪ್ಪಲಿಲ್ಲ, ನನಗೆ ನಮ್ಮಜ್ಜಿ ಮಾಡಿದ್ದು ಒಂದೋ ಏನೋ ನಾಟಕನೋಡಿದ್ದು, ಜಯಮ್ಮನೋರ್‍ದು ಎರಡು ಜ್ವಾಲಾ ಮತ್ತು ಕಯಾದು ಅದರ ಮೇಲೆ ನಾನು ಆಕ್ಟ್ ಮಾಡಕ್ಕಾಗಲ್ಲ.

ಮತ್ತೆ ಯಾವುದೂ ಅವರ ನಾಟಕ ನೋಡಿಲ್ಲಾ ಆದರೆ, ಆ ಸ್ಟೈಲ್‌ನ ತಗೊಂಡು ಬರೋದು ನಾನ್ ಮಾಡಕ್ಕಾಗಲ್ಲ. ನನ್‌ಕೈಲಾಗಲ್ಲ. ನಂ. ಕಂಪನೀನಲ್ಲಿ. ಬಹುಶಃ ನಾನೊಬ್ಬಳೇಂತ ಕಾಣ್ಸುತ್ತೆ Replica ಆಗಲಿಲ್ಲ. ಕೆಲವು ಗುಣಗಳು, ಮ್ಯಾನರುಸಂ ನಾನ್ ತಗೊಂಡಿದ್ದೀನಿ ಅಷ್ಟೇ ಏನಃ .... (.......) ಹೇಗ್ ಮಾಡ್ತಿಯೊಂದು ಮ್ಯೂಜಿಕ್ ಮೇಲೇ ಮಾಡ್ಬೇಕಾಗುತ್ತೆ, Why not this ಅಂದ್‌ಕೊಂಡು, ನೀವ್ ಬರೀರಿ ಇಂತಿಥಾದ್ದು ಅಂತ Incidents ನೆಲ್ಲಾ, Quote ಮಾಡ್ತಾ ಹೋದೆ. ಕಾರಂತರ (B.V.) ಹತ್ರನೂ ಸ್ವಲ್ಪ Discuss ಮಾಡಿದ್ವಿ. ಕಾರಂತ್ ಹೇಳ್ತಿದ್ರು ''ಗುಬ್ಬಿ ಕಂಪೆನೀಲಿ ನನಗ್ಯಾರೊ ಹೇಳಿದ್ರು ಮಾತ್ ಹಾಡಾಗ್ಬೇಕು, ಹಾಡ್ ಮಾತಾಗ್ಬೇಕೂಂತ ವಯಸ್ಸಾದ್ ಮುದುಕ್ರು, ಯಾರೂಂತ ಹೆಸರು ಗೊತ್ತಿಲ್ಲ ಅಂತ. ಅದೂ ಒಂದು ಎಳೆ ಇಟ್ಟುಕೊಂಡು, ಮತ್ತೆ High Pitchಲಿ ಯಾಕ್ ಹಾಡ್ತಾ ಇದ್ರು. ಹಿಂಗೆ. ಇದನ್ನೆಲ್ಲಾ, ನಾನ್ ಭಾರಿ ಘಾಟ್ ಅವರಿಗೆ ಹೇಳ್ತಾ ಇದ್ದೆ. ಆಗಿನ್ ಕಾಲ್ದಲ್ಲಿ ಮೈಕ್ ಇರ್‍ಲಿಲ್ಲ. ಮೇಕಪ್ ಹಿಂಗ್ ಮಾಡೋತಾ ಇದ್ರಿ, ಬರ್‍ತಾ ಬರ್‍ತಾ ಬರ್‍ತಾ ಮೇಕಪ್ ಹೇಂಗ್ Change ಆಯ್ತು, ಮೈಕ್ ಇರಲಿಲ್ಲ. ಹೆಂಗೆ ಮಾತಾಡ್ತಾ ಇದ್ರೂ Mike ಬಂದ್ ಮೇಲೆ ಹೆಂಗೆ ಕಂಟ್ರೋಲ್ ಮಾಡೋಕ್ಕ ಶುರು ಮಾಡಿದ್ವಿ. ಅದು ಬಾಳಾ ಕಷ್ಟ. ಕಂಟ್ರೋಲ್ ಮಾಡೋದ್ ಕಷ್ಟ ಆಗತ್ತೆ. ನಿನ್ನೇನೇ ನಾನ್ ಫುಲ್ Voice ಹೋಗಿದ್ದಿದ್ದು. Mike ಇಲ್ಲಿದೇ ಅಭ್ಯಾಸ ಆಗಿರುತ್ತಲ್ಲ ಅದು ಈಗ (ಮೈಕ್ ಬಂದ ಮೇಲೆ) ಕಂಟ್ರೋಲ್ ಮಾಡೋದು ಕಷ್ಟ ಆಗುತ್ತೆ, ನಿನ್ನೆನೂ ಸ್ವಲ್ಪ ಪ್ರಾಬ್ಲೆಮ್ ಆಯ್ತು. (ನಾನು ಜೋರಾಗ್ ಹೋದ್ರೆ ಇವರಿಗೆ ಬ್ಯಾಲೆನ್ಸ್ ಮಾಡೋದು ಕಷ್ಟ ಆಗುತ್ತೆ) ಅಂತ ಹೇಳ್ತಾ ಇದ್ರು. Balanceನೇ ಆಗ್ತಾ ಇರ್‍ಲಿಲ್ಲ. ಸಿಕ್ಕಾಪಟ್ಟೆ High Pitch ಗೆ ಹೋಗ್ತಿತ್ತು ಅಂತ. Even Movements restrict ಆಗ್ಬೋಗುತ್ತೆ. ಜಾಗಾ ಚಿಕ್ಕದು ಆದ್ರಿಂದ, Voice control ಮಾಡೋದ್ರ ಜೊತೆಗೆ Movements ನ control ಮಾಡಿದ್ರೆ ಉಬ್ಬಸ ಶುರು ಆಗುತ್ತೆ. ಎಲ್ಲಾ ಕಂಟ್ರೋಲ್ ಮಾಡ್ಬೇಕಲ್ಲಾ ಕಷ್ಟ ಆಗುತ್ತೆ, Open ಆಗಲಿಕ್ಕೆ ಆಗಲ್ಲ. Worm up ಆಗಲ್ಲ. To be frank

*- ಮ್ಯಾಡಂ ನೀವು, ಕಾರಂತರ ಹೆಸರು ಹೇಳಿದಿರಿ. ನಾನು ಹೋದ ತಿಂಗಳ ನಮ್ಮ ನೇಸರುವಿನಲ್ಲಿ ಅವರ ಬಗ್ಗೆ ಒಂದು ಲೇಖನ ಓದಿದೆ. ಅದರಲ್ಲಿ ಅವರು ತಮ್ಮ ನಾಟಕದ ಜೀವನ 'ಓ ನಾಮ'ವನ್ನು ಶುರು ಮಾಡಿದ್ದೇ ಗುಬ್ಬಿ ಕಂಪೆನಿಯಲ್ಲಿ ಅಂತ ಇತ್ತು. ಅದರ ಬಗ್ಗೆ ಸ್ವಲ್ಪ ಹೇಳುತ್ತೀರಾ? ಸ್ವಲ್ಪ ವಿಷಯ ಸ್ಲೈಡ್ ಟ್ರ್ಯಾಕ್ ಆಯ್ತು. ಇರಲಿ. ಅಲ್ಲಿ ಅಂದರೆ USAನಲ್ಲಿ ಹೇಗಿತ್ತು ಸ್ಟೇಜ್ ಸೆಟ್ಟಿಂಗ್ಸ್?*

ಜ: ಹೌದು, S.S.C. ಮುಗಿಸಿದ್ದಾಗಲೇ ಬಂದು ಗುಬ್ಬಿ ಕಂಪನಿ ಸೇರಿದರು. ಮೊದಲಿಗೆ ಚಿಕ್ಕ ಪುಟ್ಟ ಪಾತ್ರಗಳನ್ನು ಮಾಡುತ್ತಿದ್ದರು. ಅಲ್ಲೇ ಮೂರು ನಾಲ್ಕು ವರ್ಷ ಕಳೆದ ಮೇಲೆ ನಮ್ಮ ಅಜ್ಜಿ, ತಾಯಿ ಇವರೆಲ್ಲರ ಪ್ರೋತ್ಸಾಹದಿಂದಲೇ ಅವರು NSD ಸೇರಿದ್ದು ಅದಕ್ಕಾಗಿ ಹಣದ ವ್ಯವಸ್ಥೆ ಆಗಬೇಕಲ್ಲ, ಆಗ ನಮ್ಮ ಅಜ್ಜಿ, ತಾಯಿ, ಕಂಪೆನಿಯ ಇತರ Artist ಎಲ್ಲಾ ಸೇರಿ ತಮ್ಮ ಒಂದೊಂದು ತಿಂಗಳ ಸಂಬಳಾನ ಕೂಡಿಸಿ ಅವರಿಗೆ ಕೊಟ್ಟು ಇನ್ನೂ ಬೇಕಾದ್ರೆ ಬರಿ ಅಂತಲೂ ಹೇಳಿದ್ದರು.



ಜಯಶ್ರೀಯವರು ಬಣ್ಣದ ಬದುಕು ಕಾರ್ಯಕ್ರಮದಲ್ಲಿ.

ಆಮೇಲೆ ಅವರು ಅಲ್ಲಿ ಹೋಗಿ ಹೇಗೊ ಬಾಕಿ ವ್ಯವಸ್ಥೆ ಮಾಡಿಕೊಂಡರು.

ಜ : ಚೆನ್ನಾಗಿತ್ತು. ಕೆಲವು ಕಡೆ ಬಾಳಾನೇ ಚೆನ್ನಾಗಿತ್ತು. Phoenixನಲ್ಲಿ ಒಂದ್ರಲ್ಲೇ ಅವರ್‍ಗೆ Interest ಇಲ್ಲಿಲ್ಲ.

*- ಅವರ ಸ್ಟೇಜ್‌ಗೂ, ನಮ್ಮ ಸ್ಟೇಜ್ ಸೆಟ್ upಗೂ ಏನಾದ್ರೂ ವ್ಯತ್ಯಾಸವಿದ್ಯಾ?*

ಜ : ಬೇಸ್‌ಮೆಂಟ್‌ನಲ್ಲಿ Stage ತರ ಮಾಡಿದ್ರು ಕೆಲವು ಕಡೆ Basementನಲ್ಲಿ Stageಗೆ convert ಮಾಡಿದ್ರು ಆನಂದ್ ಒಂದ್ ತರಾ Light ಎಲ್ಲಾ ಹಾಕಿ ಇನ್ ಕೆಲವು ಕಡೆ ಮನೇಲೇನೇ (ಯಾಕೆಂದ್ರೆ ನಾವು ಯಾವಾಗಲೂ ಮನೇನಲ್ಲೇ concert ಗಳನ್ನೆಲ್ಲಾ ಮಾಡೋದು), ಅಲ್ಲ್ ಬನ್ನೀಂತ ಇನ್ ಕೆಲವು ಕಡೆ Universityನಲ್ಲಿ ಮಾಡಿದ್ರು. Los Angelesನಲ್ಲಿ ಬಹಳ ಚೆನ್ನಾಗಿತ್ತು. (Universityನಲ್ಲಿ.)

ಆ : High School Auditorium but ಅಲ್ಲಿ High School Auditorium ಅಂದ್ರೆ, Fully Equiped. ಅಷ್ಟು ಚೆನ್ನಾಗಿ ಮಾಡ್ತಾರೆ ಅಂತ ಖುಷಿಯಾಯ್ತು.

ಜ : ಇದೇ ತರಹ ತುಂಬಾನೇ ಚೆನ್ನಾಗಿತ್ತು. ಇನ್ನೂ ಚೆನ್ನಾಗಿತ್ತು.

*- Stage Space ದೊಡ್ಡಗಿತ್ತಾ?*

ಜ : ಇಲ್ಲಿ ಇದೇ ತರಹ, ಇಷ್ಟೇ ಇತ್ತು.

*- ಅಲ್ಲಿ Open Show ಅಲ್ವಾ, ಕನ್ನಡದವರಲ್ಲದೆ ಬೇರೆ ಬಂದಿದ್ರಾ?*

ಜ : ಕನ್ನಡದವರೂ ಬಂದಿದ್ರೂ, ಬೇರೆಯವ್ರು ಬಂದಿದ್ರೂ.

*- ಅಲ್ಲಿಯವರು ಹೇಗೆ Accept ಮಾಡಿಕೊಂಡರು.*

ಜ : ಅಲ್ಲಿ ಕಾತನ್ನ ನೋಡಿದವ್ರು ಕಾತನ ಕಂಪನಿ ಬಗ್ಗೆ ಗೊತ್ತಿರೋರು, ಸಾಕಷ್ಟು ಜನ ಇದ್ದಾರೆ. ಕಾರಂತರ ಬಗ್ಗೆ ಗೊತ್ತಿರೋರು ಸಾಕಷ್ಟು ಜನ ಇದ್ದಾರೆ. ಜೊತೆಗೆ ಹಾಡುಗಳು ಬಾಳಾ ಇಷ್ಟ ಆಯ್ತು ಅವರಿಗೆ, ಜೊತೆಗೆ ಇದು ಹೊಸತರ ನೀವು ಇದನ್ನು ಮಾಡಿರೋದು ನಾವು ಏನಿದ್ರೂ ಭಾವ ಗೀತೆಗಳನ್ನು ಕೂತ್ಕೊಂಡು ಕೇಳ್ತಾ ಇದ್ವಿ. ಈ ತರ ಆಗುತ್ತೆಂತ ಅಂತ ನಮಗೆ ಗೊತ್ತೇ ಇರಲಿಲ್ಲ. ಅದು ಬೇರೆ ತರಾನೇ ಇತ್ತು. ಅಂತ ಬಾಳಾ ಇಂಪ್ರೆಸ್ ಆದ್ರೂ. Why don't you bring your troops. ಜೊತೆಗೆ ನಮಗೂನೂ ಬಂದ್ ಹೇಳ್‌ಕೊಡೀಂತ ಬಂದಿದ್ರೂ. ಇನ್ ಕೆಲವ್ರು ಒದ್ 8 ಜನಾನಾದ್ರೂ ಬಂದು ರಂಗಗೀತೆಗಳನ್ನು ನಮಗೆ ಹೇಳ್‌ಕೊಡಿ ಇಲ್ಲಿ, ನಮ್ಮನ್ನೂ ಪ್ರಿಪೇರ್ ಮಾಡಿ ನಾವ್ ಇಲ್ಲೆ. ಇರೋದು, ನಮಗೂ ಗೊತ್ತಾಗ್ ಬೇಕೂಂತ ಅಂದ್ರು. ಈ ತರಹ ಒಂದು Positive ಆಗಿ ಬಂತು ಅಂದ್ರೆ ಅವರು ಮುಂದೆ ಬಂದಿದ್ದಾರೆ.

ಅಲ್ಲಿ ದುಡ್ಡಿಗೇನೂ ಕಡಿಮೆ ಇಲ್ಲ. ದುಡ್ಡಿಗೇನೂ ಪ್ರಾಬ್ಲೆಮ್ ಇಲ್ಲ. ಅಂದ್ರೆ ಈಗ Sept. 11 ಆದ್ ಮೇಲೆ problem ಇದೆ. But Still. ನಮಗೆ ದುಡ್ಡಿಗ್ Problem ಇಲ್ಲ. ಆದ್ರೆ ನೀವು ನಮಗೆ ಹೇಳ್‌ಬೇಕು. ಏನ್ ಮಾಡ್‌ಬೇಕೂಂತ ನೀವ್ ನಮಗೆ ಹೇಳಿ, ನಾವ್ help ಮಾಡ್ತೀವಿ ಅಂತ ಹೇಳಿದ್ದಾರೆ.

*- ಹಾಗಾದ್ರೆ ಏನ್ ಮಾಡ್ತೀರಾ?*

ಜ : ನಾವ್ ದಶಾವತಾರಾ ಬಗ್ಗೆ ಮಾತಾಡಿ ಎರಡು ವರ್ಷವಾಯ್ತೇನೋ. ನನಗೇ ನೋ ಜೀವನದಲ್ಲಿ ಒಂದು ದೊಡ್ಡ ಆಸೆ ಇದೆ. ನನಗೇನಾದ್ರೂ ಲಾಟರಿ ಬಂದ್ರೆ ಗುಬ್ಬಿ ಕಂಪನಿ ರಿ ವೈವ್ ಮಾಡ್ಬೇಕೂಂತ ಈಗಿನ ಟೆಕ್ನಿಕ್ ಉಪಯೋಗಿಸಿಕೊಂಡು (ಆವಾಗೆಲ್ಲಾ ಮಾನ್ಯುಅಲ್ ಅಲ್ವಾ) ಮೊನ್ನೆ ಆನಂದ್ ಬರ್‍ತಾ ಅದನ್ ಹೇಳಿದ್ರು. ಜೊತೆಗೆ ಅಲ್ಲಿ Phantion of the opera ನೋಡಿದ್ವಿ Threll ಅನ್ನಿಸಲಿಲ್ಲ. ನಮ್ಮಲ್ಲೆ ಇದ್ದುಗೊಂಡು ನಮ್ಮಲ್ಲಿ ಯಾಕೆ ಯಾರು ಇದಕ್ಕೆಲ್ಲಾ ಗಮನ ಕೊಡಲ್ಲ. ನಮಗೆ ಕುಂದು ಅನ್ನೋದು ಇರೋದು ದುಡ್ಡಿನ ಅಭಾವ ಅಷ್ಟೇನೆ. ಈಗ್ಲೂ ಯಾರಾದ್ರೂ ಹೆಲ್ಪ ಮಾಡಿದ್ರೆ ನಾವ್ ಮಾಡಕ್ಕೆ ರೆಡಿ ಇದ್ದೇವಿ, ಪ್ರಿಪೇರ್ ಮಾಡಕ್ಕೆ ರೆಡಿ ಇದ್ದೀವಿ.

**- ಅಂದಾಜು ಎಷ್ಟು ಖರ್ಚು ಬರಬಹುದು.**

ಆ : 10 ಲಕ್ಷ

ಜ : ನಾಲ್ಕು Troop ಸೇರ್‍ಕೊಂಡು ಕಲಾಕ್ಷೇತ್ರದಂಥ ನಾಲ್ಕ್ ಸ್ಟೇಜ್ ಹಾಕಿಬಿಟ್ಟರೆ ಕಲಾ ಕ್ಷೇತ್ರದ ಪಕ್ಕದಲ್ಲೇ ಅಥವಾ ಬೇಕಾದ್ರೆ ಬೇರೆ ಜಾಗ ಕೊಟ್ಟರೆ.

**- ನಾಲ್ಕ್ ಸ್ಟೇಜ್ ಬೇಕಾಗುತ್ತಾ?**

ಜ : ನಾಲ್ಕು Troop ಬಂದಾಗ ಬೇಕೇ ಬೇಕಲ್ವ, ಅದು ಯಾವ್ಯಾವ ತರದಲ್ಲಿ ಮಾಡುತ್ತೊ ಏನ್ ಕಥೆನೋ ನ್ಯೂಯಾರ್ಕ್‌ನಲ್ಲಿಂತಂದ್ರೆ ಫುಲ್ ಆ ರೋಡ್ Broadway Road ತುಂಬಾ Theatreಗಳಿದ್ದಾವೆ. ಅದಕ್ಕೆ Broadway Show ಅಂತಾರೆ ಅಷ್ಟರಲ್ಲೂ show ಆಗ್ತಾ ಇರುತ್ತೆ.

ಆ : Broadway ನಲ್ಲಿ 42 Theatre ಗಳಿದ್ದಾವೆ. Production designer ಅಂದ್ರೆ ಬರೀ Production Design ಅಲ್ಲ. Theatre ಯಿಂದಾನೇ Design ಮಾಡೋಕ್ಕೆ ಶುರು ಮಾಡ್ತಾರೆ. The whole theatre in emptied. ಈ Stage ಏನಿದೆ ಅದನ್ನೇ ಅವರ ಡಿಸೈನ್ ಮಾಡ್ತಾರೆ. ಅದರ ಮುಂದೆ ಏನ್ ಬೇಕು ಅದನ್ನು ಕಟ್ಟಿಕೋತಾರೆ. Hydraulic chains ಹಾಕ್ಕೊತ್ತಾರೆ. ಕೆಳಗಡೆಯಿಂದ ಮೇಲೆ ಹೋಗಕ್ಕೆ whole stageನೇ Designed for the production. ನಾವೇನ್ ಮಾಡ್ತೀವಿ ಮೊದಲು production ಮಾಡ್ಕೊಂಡು ಆಮೇಲೆ ಏನ್ Stage ಸಿಕ್ಕುತ್ತೆ ಅದರ ಮೇಲೆ ಅಡ್ಜಸ್ಟ್ ಮಾಡ್ಕೋತೀವಿ. ಅಲ್ಲಿ ಹಾಗಲ್ಲ ಅಲ್ಲಿ Theatre is also important. ಯಾಕೆಂತಂದ್ರೆ 10-10 ವರ್ಷ ನಡೆಯುತ್ತೆ ಒಂದೊಂದ್ Production. ಈಗ ನಾವು ನೋಡಿದ Phantom of the opera ನಡೀತಿರೋದು 6ನೇ ವರ್ಷ ಅದಕ್ಕೂ ಟಿಕೆಟ್ ಸಿಕ್ಕದೆ ಬಾಳಾ ಕಷ್ಟಪಟ್ಟು ತಂದು ತೋರಿಸಿದ್ರು, Full House ನಮ್ಮಲ್ಲಿ ಆತರ Theatre ಇಲ್ಲ.

ಜ : ಕಲಾಕ್ಷೇತ್ರ ಒಂದು ಬಿಟ್ರೆ

*- ಕಲಾಕ್ಷೇತ್ರ ಕೂಡಾ ಆ ತರಹ ಇಲ್ಲ.*

ಜ : ಅಲ್ಲ ಕಲಾಕ್ಷೇತ್ರ ಒಂದು ಬಿಟ್ರೆ ನಮ್ಮಲ್ಲಿ Theatre ಇಲ್ಲ. ಹಂಗೆ ನಾಲ್ಕು Theatre ಆದ್ರೆ, ನಾಲ್ಕು Troop ಮನಸ್ಸು ಮಾಡಿದ್ರೆ continues ಆಗಿ Whether loss or gain ಮಾಡ್ತಾ ಹೋಯ್ತೊಂತಂದ್ರೆ ಯಾಕ್ ಜನಾ ಬರಲ್ಲಾ. ಒಳ್ಳೆ ಪ್ರೊಡಕ್ಷನ್ ಮಾಡಿಬಿಟ್ಟು ನೀವು ಹಾಕಿದ್ರೆ ಯಾಕ್ ಜನಾ ಬರಲ್ಲ?

*- ಎಷ್ಟು ಖರ್ಚಾಗಬಹುದೂಂತ ನಿಮ್ಮ ಅಂದಾಜು?*

ಖರ್ಚಾಗುತ್ತೆ ಖಂಡಿತಾ ಆಗುತ್ತೆ 5 ಲಕ್ಷ, 6 ಲಕ್ಷ ಕ್ಕಿಂತ ಕಡಿಮೆ ಆಗಲ್ಲ.

ಆ : 'ದಶಾವತಾರಕ್ಕೆ 10 ಲಕ್ಷ ಆಗುತ್ತೆ.

ನಮ್ಹತ್ರ Technology ಇದೆ, Resource ಇಲ್ಲ.

ಜ : ಕಲಾಕ್ಷೇತ್ರಾ ನಾವ್ chage ಮಾಡ್ತೀವೀಂತಂದ್ರೆ ಯಾಕ್ ಕೊಡ್ತಾರೆ chage ಮಾಡೋಕ್ಕೆ !

*- ನಾನ್ ನಿಮ್ಮನ್ನ್ ಅದನ್ನ ಕೇಳೋದು ಉಚಿತ.*

ಆ : ಅವರ ಪ್ರಕಾರ ಈಗ ದಶಾವತಾರ stage ಮಾಡ್ಬೇಕಾಂತಂದ್ರೆ At least ಒಂದು ಎರಡು ತಿಂಗಳು ಮಾಡಬೇಕು. ಅಂದ್ರೆ ಒಂದು 60/100 ಶೋ ಮಾಡಬಹುದು. 100 show ಮಾಡಕ್ಕೆ ಬೆಂಗಳೂರಿನಲ್ಲಿ ನಿಮಗೆ ಯಾವ Theatre ಸಿಕ್ಕಲ್ಲ.

*- Block Booking ಮಾಡಲ್ವಾ*

ಆ : ಒಂದು ದಿವಸ ಮಾಡೋದು ಕಷ್ಟ ಅಂತಾದ್ರಲ್ಲಿ 100 Show ಮಾಡ್ತೀವಿ ಅಂದ್ರೆ ಯಾರೂ ಕೊಡಲ್ಲ. (ಎರಡು ದಿವಸಕ್ಕೆ ಕೊಡಲ್ಲ) ಗುಬ್ಬಿ ಕಂಪನೀದೇ Theatre ಆದ್ರೆ ಮಾಡಬಹುದು.

*- ನಮ್ಮದೇ ಒಂದು ಬೇಕು ಅಂದ್ರೆ ಜಾಗಾ ಬೇಕಾಗುತ್ತೆ ಬೇಕೆ ಸ್ಟೇಜ್ ಕಟ್ಬೇಕಾಗುತ್ತೆ. ಅಂದ್ರೆ ಅಲ್ಲಿಂದ ನಮ್ಮ Investments ಶುರು ಆಗುತ್ತೆ.*

ಆ : Grass root level ಅಂತಾರಲ್ಲ ಹಾಗೆ. ಎಲ್ಲರೂ ಸೇರಿದ್ರೆ ಮಾಡಬಹುದು.

*- ನೀವು ಹೇಳೋದು ನೋಡಿದ್ರೆ ಅದೇನಂಥಾ ದೊಡ್ಡ Amount ತರ ಕಾಣಲ್ಲ.*

ಜ : ದೊಡ್ಡ Amount ಅಲ್ಲದೇ ಹೋದ್ರು Invest ಮಾಡೋದುಬೇಕಲ್ಲ, Govt. ಒಂದು ಸ್ವಲ್ಪ ಬೆನ್ನು ತಟ್ಟಿದ್ರೆ. ಜಾಗಾ ಕೊಡ್ತೀವಿ ಅಂತಾನೋ, ಏನ್ ಖರ್ಚ್

ಬರುತ್ತೆ ಅದ್ರಲ್ಲಿ ಅರ್ಧ ಭಾಗ ಕೊಡ್ತೀವಿ ಅಂತಾನೋ, ¼ಭಾಗ ಕೊಡ್ತೀವಿ ಅಂತಾನೋ ಅಂತಂದ್ರೆ, ನಾವು Foundation ಶುರು ಮಾಡಬಹುದಲ್ಲಾ, ಆಮೇಲೆ ಅದನ್ನು ಹೇಗೆ ಬೇಕಾದ್ರೂ, ಯಾವಾಗ್ ಬೇಕಾಗಿದ್ರು ಕನ್‌ವರ್ಟ್ ಮಾಡ್ಕಾ ಹೋಗ್ಬಹುದು.

(ಅಲ್ಲಿ Phantom of the Operaನಲ್ಲಿ ಹೇಗಿತ್ತೂಂದ್ರೆ) ಏನು ನೆಲದ ಮೇಲೆ ನಾಟಕ ಶುರುವಾಗೋದಿಕ್ಕೆ ಮುಂಚೆ ಆ ಕರ್ಟನ್ Open ಆಗೋದೇ ವಿಚಿತ್ರವಾಗಿ Open ಆಗ್ತಾ ಇರುತ್ತೆ ಒಂದು ಹಿಂಗ್ Open ಆಗ್ತಿರುತ್ತೆ, ಇನ್ನೊಂದೆಲ್ಲೊ ಹಿಂಗ್ ಹಿಂದ್‌ಗಡೆ ಹೋಗ್ತಿರುತ್ತೆ, ಅದ್ Open ಆಗ್ತಿದ್ದಾಗ್ಲೇನೇ ನಮ್ಮುಂದೇನೂ ದೊಡ್ಡದಾಗಿ ಹಿಂದೇನೋ ಬಟ್ಟೆ ಹೊದಿಸಿ ನಿಲ್ಲಿಸಿದ್ದಾರೆ ಆ ಕಡೆ ಈ ಕಡೆ ಒಂದು ಮೂರು ಜನ ಕೂತಿರುತ್ತಾರೆ. Action ನಡೀತಿರುತ್ತೆ. Action ಶುರು ಆಗ್ತಿದ್ದಾಗಲೇ ಮೂರನೇದೊಂದು ಏನೊ ಒಂದು ಬೊಂಬೆ ತರ, ಒಂದು ಕೋತಿ ತಾಳ (ಹೀಗೆ) ಹೊಡ್ಕೊಂಡು ಅದು ದೊಡದ್ ತಕ್ಷಣ ಅದೊಂದ್ ತರ ಮ್ಯೂಸಿಕ್ ಶುರುವಾಗುತ್ತೆ. ಮ್ಯೂಸಿಕ್ ಶುರುವಾಗ್‌ತ್ತಿದ್ದಾಗೇನೇ ಅವನು ಅದ್ ನನಗೆ ಬೇಕೂಂತಾನೆ. Its Accually a Hash Back ಅದನ್ ತಗೊಂಡ್‌ತಿದ್ದಾಗೆ ಒಂದು ಶಾಂಡ್ಲಿಯಾನಾ ಬರುತ್ತೆ ನನಗೆ ಇದು ಬೇಕು ಅಂತಾನೆ ತಕ್ಷಣ ಅದು ಶಾಂಡ್ರಿಲಾ ಬಂದಿದೆ ಅಂದ್ ಬಿಟ್ಟು ಅದನ್ ಓಪನ್ ಮಾಡ್ತಾರೆ. ತಕ್ಷಣ ಇಷ್ಟು ಲಕ್ಷ ಅಂತ ಕೂಗ್ತಾರೆ. ಕೂಗ್ತಿದ್ದಾಗೇನೇ ಹಿಂದಗಡೆ ಬೆಂಕಿ ಒಂದು ಥಬ್ ಅನ್ನುತ್ತೆ. ಆ ಕ್ಷಣ ಆ Chandliana ಎದ್ದು ಕುಕ್ಕೊಂಡು ಹೋಗಿ Auditoriomನಲ್ಲಿ ತೂಗಾಡುತ್ತೆ ಜನ ತಲೆ ಎತ್ಕೊಂಡು ನೋಡ್ತಾ ಕೂತ್ಕೋತಾರೆ ಇಲ್ಲಿಂದ ಇಲ್ಲಿಗೆ ಹೋಗುತ್ತಲ್ಲಾಂತ.

ಆ: ಸಣ್ಣ ಶಾಂಡ್ಲಿಯಾನಾ ಅಲ್ಲಿ ಇಷ್ಟು ದೊಡ್ಡ ರೂಂ ನಪ್ಪಿರುತ್ತೆ.

ಜ: ಅಷ್ಟು ದೊಡ್ಡದು? ಅಲ್ಲೇನೇ ಹಿಡಿತಾರೆ (ಆಡಿಯನ್ಸ್‌ನ) ಕರ್ಟನ್ ಓಪನ್ ಆಗೋದ್ರಿಂದಾನೇ ಹಿಡಿಯೋಕ್ ಶುರು ಮಾಡ್ತಾರೆ (ಆಮೇಲೆ) ಎಲ್ಲಿಂದ್ರಲ್ಲಿ ಆರ್ಟಿಸ್ಟ್‌ಗಳು ಮೂವ್ ಮಾಡಕ್ಕೆ ಜಾಗಾ ಇರತ್ತೆ ಒಬ್ಬ ಮ್ಯೂಸಿಕ್ ಏಂಜೋಲ್‌ನ ಕರಕೊಂಡು ಹೋಗ್ ಬೇಕೂಂದ್ರೆ. ನಿಧಾನವಾಗಿ ಹೊಗೆ ಆಡಿಟೋರಿಯಂನಲ್ಲಿ ತುಂಬ್ಕೋತಾ ಬರುತ್ತೆ ಬಂದು, ಬಂದು ಇಡೀ ಸ್ಟೇಜ್ ಎಲ್ಲಾ ಹೊಗೆ ಮಾಯವಾಗಿಬಿಡುತ್ತೆ ಆ ಹೊಗೆ ಒಳಗಿಂದ ಏಂಜೆಲ್‌ನ ಕರಕೊಂಡು ಹೋಗ್ತಾನೆ. ಒಳಗಡೆ ಹೋಗ್ತಿದ್ದಾಗೇನೇ ಅವರು ಈ ಕಡೆಯಿಂದ ವಾಪಸ್ ಬರ್‍ತಾ ಇರ್‍ತಾರೇ. ಅಲ್ಲಿಂದ ಬರ್‍ತಿದ್ದಾಗೇನೇ ಇಲ್ಲೊಂದು ಬ್ರಿಡ್ಜ್ ಕಾಣುತ್ತೆ. ಬ್ರಿಡ್ಜ್ ಇಳೀತಿದ್ದಾಗೇನೇ ಈ ಸೈಡ್ ಮೇಲಕ್ ಹೋಗುತ್ತೆ, ಇದು ಕೆಳಕ್ ಹೋಗುತ್ತೆ, ಇಲ್ಲಿ ಇಳೀತ್ತಾರೆ, ಹಿಂಗೆ ಟಕ್ ಅಂತ ಇದ್ದಕ್ಕಿಂದ್ದ ಗೇನೇ Procediumನಲ್ಲಿ ಒಂದು ಗುಂಪು. ಗುಂಪಾಗಿ ಏಂಜೆಲ್ಸ್ ಇರ್‍ತಾವೆ. ಅಲ್ಲಿ ಡಬ್ ಅಂತ ಬೆಂಕಿ ಬಂದು ಏಂಜೆಲ್ಸ್ ಕೆಳಗೆ ಬರ್‍ತಾರೆ.

*- ಈ ವಿಷಯದಲ್ಲಿ ಅಂದರೆ Technics ವಿಷಯದಲ್ಲಿ ನೀವು ಹೇಳಿದ್ದಿರಂತೆ ನಮ್ಮ ಗುಬ್ಬಿ ಕಂಪೆನಿಯಲ್ಲಿ ಮೊದಲೇ ಇದರ ಪ್ರಯೋಗ ಮಾಡಿದ್ದರು ಅಂತ. ಅದೇನೂ ಅನ್ನೋದನ್ನ್ ವಿವರಿಸ್ತೀರಾ?*

ಆ: ಅದೇ ಆಗ್ನೇಯಾಸ್ತ್ರ ಅಂದರೆ. ಬಾಣ ಬಿಟ್ರು ಬೆಂಕಿ ಬರ್‌ಸೋದು, ವರುಣಾಸ್ತ್ರ ಅಂದರೆ ಬಾಣ ಬಿಟ್ರು ನೀರು ಬರ್‌ಸೋದು, ಆಮೇಲೆ 'ಕಚ ದೇವಯಾನಿ' ನಾಟಕದಲ್ಲಿ ಕಚ ಶುಕ್ರಾಚಾರ್ಯರ ಹೊಟ್ಟೆ ಸೀಳಿ ಆಚೆ ಬರೋದು, ತಲೆ ಕತ್ತರಿಸಿದಾಗ ತಲೆ ಸಪರೇಟ್ ಆಗಿ ಹೋಗೋದು ಇದನ್ನೆಲ್ಲಾ ಗುಬ್ಬಿ ಕಂಪೆನಿ ಸುಮಾರು ಮಾಡಿದ್ದಾರೆ.

*- ಹಾಗಾದ್ರೆ ಈಗ ಹೊಸದೇನು ಮಾಡಿದ್ದಾಗಾಯ್ತು?*

ಜ: ಈಗೆಲ್ಲಾ ಕಂಪ್ಯೂಟರ್ಸ್ ಮಾಡಿದ್ದಾರೆ.

ಆ: ಗುಬ್ಬಿ ಕಂಪನೀಲಿ ಎಲ್ಲಾ ಮಾನ್ಯೂಯಲ್ ಆಪರೇಶನ್ಸ್. ಈಗ ಇಲ್ಲಿ (High) Hitech. Computerised Hydmlics. ತರ. ಈಗ ಗುಬ್ಬಿ ಕಂಪನೀಲಿ 'ಕಾಳಿಂಗ ಮರ್ದನ' ನಾಟಕದಲ್ಲಿ ಕೃಷ್ಣ ಕಾಳಿಂಗನ ತಲೆ ಮೇಲೆ ಕುಣೀಬೇಕಾದ್ರೆ ನಾಲ್ಕು ಜನ ಕೃಷ್ಣನ್ನ ಹ್ಯಾಂಡಲ್ ಮಾಡುತ್ತಿದ್ದರು. ಹತ್ತು ಜನ ಕಾಳಿಂಗನ್ನ ಹ್ಯಾಂಡಲ್ ಮಾಡಿತ್ತಿದ್ದರು. ಇಲ್ಲಿ ಇದರೇನ್ ಮಾಡ್ತಾರೇಂದ್ರೆ ಅದನ್ನೇ Computerised ಮಾಡ್ತಾರೆ. Technically Handle ಮಾಡ್ತಾರೆ.

ಮತ್ತೆ ಅಲ್ಲಿ ಶೋ ಮಾಡಕ್ಕೆ ಇನ್ವಿಟೇಶನ್ ಬಂದಿದೆ ಅಂದ್ರಿ.

ಜ: ಹೌದು Invitation ಬರ್‍ತಾನೇ ಇವೆ. ಯಾವುದು ಏನ್ ಮಾಡಬೇಕು ಅನ್ನದನ್ನ ಡಿಸೈಡ್ ಮಾಡಿ ಅಂತ ಹೇಳಿದಾರೆ.

*- ಮೊನ್ನೆ ನೀವು ಇಲ್ಲಿ ಸ್ಪೈಡ್ ಶೋ ಮಾಡಿದಾಗ ಸ್ಟೇಜ್‌ನ ಒಂದು ಸ್ಪೈಡ್ ಸ್ಕ್ರೀನ್ ಇಟ್ಟಿದ್ದೀರಿ. ಮತ್ತೆ ಬಾಕಿ ಸ್ಟೇಜ್ ಫುಲ್ ನಿಮಗೆ ಮೂವ್ ಮಾಡೋದಕ್ಕೆ Open ಆಗಿತ್ತು. ನೀವು ಅಲ್ಲಿ ಮಾಡಿದಕ್ಕೇನಲ್ಲೂ ಇದೇ ತರಹ ಅರೇಂಜ್‌ಮೆಂಟ್ ಇತ್ತಾ?*

ಕೆಲವು ಕಡೆ ನಾವು ಸ್ಪೈಡ್ ಶೋ ಮಾಡಲೇ ಇಲ್ಲ. ಮಾಡಿದ್ ಕಡೆ ಹೇಗಿತ್ತು. ಕೆಲವು ಕಡೆ ಬ್ಯಾಕ್ ಸೈಡ್‌ನಲ್ಲಿ ಸ್ಪೈಡ್ ಶೋ ನಡೀತಿರೋದು, ಫ್ರಂಟ್ ಅಲ್ಲಿ ಜಯಶ್ರೀಯವರು ಮೂವ್ ಮಡ್ತಿದ್ರು. ಇನ್ನು ಕೆಲವು ಕಡೆ ಹೀಗೆ ಸೈಡ್‌ನಲ್ಲಿ ಸ್ಕ್ರೀನ್ ಇತ್ತು. ಸುಮಾರು ಕಡೆ ನಾವು ಸ್ಪೈಡ್ ಶೋ ಮಾಡ್ಲೇ ಇಲ್ಲ.

*- Next ಏನ್ ಮಾಡ್ಬೇಕೊಂತಿದೀರಾ*

ಜ: ಎರಡು ಪ್ರಾಜೆಕ್ಟ್ (Project) ಕೈನಲ್ಲಿದೆ ಯಾವುದು ತಗೋಕೀನಿ ಅಂತ ಗೊತ್ತಿಲ್ಲ.

*-ಯಾವ ತರದ್ದು?*

ಜ: ಲಿಂಗ ದೇವರು ಹಳೇಮನೆ ಬರೆದಿರುವಂಥ 'ಗುಡಿ ಲಂಕ್ ಕುಡಿಮುತ್ತ' ಅಂತ ಒಂದು ನಾಟಕ ಇದೆ. ಇನ್ನೊಂದು ಎಚ್.ಎಸ್. ವೆಂಕಟೇಶ ಮೂರ್ತಿ ಬರೆದಿರೋ 'ಮಂಥನ'.

*- ಈಗ ಕಂಪೆನಿಗಳು ಇಲ್ವಾ ಅಲ್ವಾ?*

ಜ: ಯಾಕೆ, ಚಿಂದೋಡಿ ಲೀಲಾ ಅವರದ್ದೇ, ಗುಡಿಗೇರಿ ಅವನ್ನಿದೆ. ಅಂದರೆ ನಾರ್ತ್ ಕರ್ನಾಟಕ ಕಡೆ ಇದೆ. ಅವರದೆಲ್ಲಾ ಸೋಷಿಯಲ್ ನಾಟಕಗಳು. ಗುಬ್ಬಿ ಕಂಪೆನಿ, ವರದಾಚಾರ್ ಕಂಪೆನಿ ಮಾಡ್ತಿದ್ದಂಥ ನಾಟಕಗಳು ಅವರಲ್ಲಿಲ್ಲ.

*-ಅಂದರೆ ಮೊದಲಿನ ಹಾಗೆ ಕಂಪೆನಿಗಳು ಊರೂರಿಗೆ ಹೋಗಿ ಕ್ಯಾಂಪ್ ಹಾಕಿ. ನಾಟಕ ಮಾಡ್ತಿದ್ರಲ್ಲಹಾಗೆ ಇಲ್ಲಾ ಅಲ್ವಾ.*

ಜ: ಇಲ್ಲ. ಒಂದೊಂದು ಸಲ ಬೆಂಗಳೂರಿಗೆ ಬರ್‍ತಾರೆ. ಗುಬ್ಬಿ ಕಂಪೆನಿ ಕಾರ್ಪೊರೇಷನ್ Stageನಲ್ಲಿ ಆಡ್ತಾರೆ ಅಷ್ಟೆ.

*-ಗುಬ್ಬಿ ಕಂಪೆನಿ ಈಗ ಇಲ್ಲ ಅಲ್ವಾ.*

ಜ: ಗುಬ್ಬಿ ಕಂಪೆನಿ ಈಗ ನಿಂತ್ಹೋಯ್ತು. 5-6 ವರ್ಷ ಆಯ್ತು.

*-ಗುಬ್ಬಿ ಕಂಪೆನಿ ಕಡೆಯಿಂದ ಈಗ ನೀವೊಬ್ಬರೇ ರಿಪ್ರೆಸೆಂಟೇಟಿವ್ ಉಳಿದಿರೋದಾ?*

ಜ: ಯಾಕೆ ನಮ್ಮ ತಾಯಿ ಇದ್ದಾರೆ, ದೊಡ್ಡಮ್ಮ ಇದ್ದಾರೆ?

*- ಅವರು ಈಗ ಆಕ್ಟೀವ್ ಆಗಿ ಏನೂ ಮಾಡ್ತಾಯಿಲ್ಲ ಅಲ್ವಾ.*

ಜ: ಇಲ್ಲ ಅವರಿಗೆ ವಯಸ್ಸಾಗಿದೆ.

*- ಈಗ ಆಕ್ಟೀವ್ ಆಗಿರೋದು ಗುಬ್ಬೀ ವೀರಣ್ಣೋರ ಕಂಪೆನಿಯ ಜೊತೆ ಒಂದು Identification ಹೊಂದಿರೋರು ಅಂತ ನಾವು ನಾವು ನಿಮ್ಮನ್ನೇ ಹೆಸರಿಸಬೇಕಲ್ಲವೇ*

ಜ: ಅದೇನೋ ನಂಗೊತ್ತಿಲ್ಲ.

---

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For**

**INDIAN AIRLINES & JET AIRLINES**

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# ಭಾರತೀಯ ಕಲೆ

ಭಾಗ - 9

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದು ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

### ಕರ್ನಾಟಕದಲ್ಲಿ

ಕರ್ನಾಟಕದಲ್ಲಿ ಆಧುನಿಕ ಕಲೆಯ ಬೆಳವಣಿಗೆಯನ್ನು ಈ ಶತಮಾನದ ಆದಿಭಾಗದಲ್ಲಿ, ಪಾಶ್ಚಾತ್ಯ ಕಲೆಯ ವಿವಿಧ ಪದ್ಧತಿಗಳು ಮತ್ತು ಕಲಾ ಶಿಕ್ಷಣದ ಪ್ರಭಾವದಿಂದ ಅಕಾಡೆಮಿಕ್ ಶೈಲಿ ಬಳಕೆಗೆ ಬಂದಿತು. ಅಲ್ಲದೆ ರವಿ ವರ್ಮನ ಪ್ರಭಾವ. ಅನಂತರ ಬಂಗಾಳದಲ್ಲಿ ನಡೆದ ರಾಷ್ಟ್ರೀಯ ಶೈಲಿಯ ಪ್ರಭಾವದಿಂದ ಕಥಾನಕ, ಪ್ರಕೃತಿ ಚಿತ್ರ, ವಾಸ್ತವಿಕ ಚಿತ್ರಗಳಿಗೆ ಪ್ರಾಧಾನ್ಯತೆಯಿದ್ದು, ಅವನೀಂದ್ರನಾಥ ಠಾಗೂರರ ಶಿಷ್ಯರು ಮತ್ತು ಬಂಗಾಳ ಶೈಲಿಯಲ್ಲಿ ಪರಿಣತರಾಗಿದ್ದ ಕೆ. ವೆಂಕಟಪ್ಪನವರು ಪ್ರಮುಖರು. ಅಲ್ಲದೆ ಕಲಾವಿದನ ವೈಯಕ್ತಿಕ ಹಾಗೂ ಸಾಮೂಹಿಕವಾಗಿ ಹೋರಾಟ ನಡೆದಿದ್ದು, ಕಲಾ ಪ್ರಗತಿ ಮಂದಗತಿಯಲ್ಲಿ ನಡೆದಿರುವುದನ್ನು ಕಾಣುತ್ತೇವೆ. ಕರ್ನಾಟಕದ ಬಹುಪಾಲು ಕಲಾವಿದರು ದಂಡಾವತಿ ಮಠರ ನೂತನ ಕಲಾ ಮಂದಿರ ಮತ್ತು ಜೆ.ಜೆ. ಕಲಾ ಶಾಲೆಯಲ್ಲಿ ಅಲ್ಲದೆ ಮೈಸೂರಿನ ಚಾಮರಾಜೇಂದ್ರ ಕಲಾ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದರು. ಹೊಸ ವಿಚಾರಗಳನ್ನು ಸ್ವೀಕರಿಸಿ, ತಮ್ಮ ಚಿಂತನೆಗಳಿಂದ ನವೀನತೆಗಳನ್ನು ನೀಡಲಿಲ್ಲ. ಕೇವಲ ಪ್ರಕೃತಿ ಚಿತ್ರ, ಭಾವಚಿತ್ರ, ಕಥಾನಕ ಚಿತ್ರಗಳು ನಿರ್ಮಾಣವಾದವು.

ಕರ್ನಾಟಕದಲ್ಲಿ ರಾಷ್ಟ್ರೀಯ ಕಲಾ ಪ್ರದರ್ಶನ, ಹೆಬ್ಬಾರ್ ಮತ್ತು ಹುಸೇನ ಕಲಾ ಪ್ರದರ್ಶನಗಳು ಅರವತ್ತರ ದಶಕದಲ್ಲಿ ನಡೆದರೂ, ನಿಜವಾಗಲೂ ಆಧುನಿಕ ಕಲಾ ಚಳವಳಿ ಪ್ರಾರಂಭವಾದುದು 'ನಾವು ನಾಲ್ಕರು' ಕಲಾವಿದರಿಂದ. ಈ ತಂಡದ ಪಟೇಲ್, ಆರ್.ಎಂ. ಹಡಪದ್, ಮನೋಲಿ, ಜಿ.ವೈ. ಹುಬ್ಳೀಕರ್ ಅವರ ಕಲಾಕೃತಿಗಳು ಜನರಿಗೆ ಹೊಸ ಅನುಭವ ನೀಡಿದವು. 'ಪ್ರಗತಿ ಪರ ಕಲಾವಿದರು' ಗುಂಪಿನಲ್ಲಿ ಜಿ.ಎಸ್. ಶೆಣೈ, ಯು. ಭಾಸ್ಕರ ರಾವ್, ರಮೇಶ್ ರಾವ್, ಪುಂಚಿತ್ತಾಯ ಅವರು ಜನರ ಗಮನ ಸೆಳೆಯುವ ಅನೇಕ ಕಲಾ ಪ್ರದರ್ಶನಗಳನ್ನು ನಡೆಸಿದರು. 'ನಾವು ನಾಲ್ಕರು'- 'ನಾವು ಏಳು' ಗುಂಪಾಗಿ, ಹೊಸದಾಗಿ ಪೀಟರ್ ಲೂಯಿಸ್, ಜಸುರಾವಲ್ ಮತ್ತು ಎಸ್.ಸಿ. ಶೆಟ್ಟಿ ಸೇರಿದರು. 'ಪ್ರಗತಿ ಪರ' ಗುಂಪು ನಂತರ 'ಮೈಸೂರು ಆರ್ಟ್ ಕೌನ್ಸಿಲ್' ಸಂಸ್ಥೆಯಾಗಿ, ಅನೇಕ ಕಲಾ ಪ್ರದರ್ಶನಗಳನ್ನು ರಾಜ್ಯ ಮತ್ತು ರಾಷ್ಟ್ರದ ಪ್ರಮುಖ ಸ್ಥಳಗಳಲ್ಲಿ ಸಂಘಟಿಸಿದರು. ಹಲವು ವರ್ಷಗಳ ನಂತರ ಕ್ರಿಯಾತ್ಮಕ ಕಲಾ ಚಟುವಟಿಕೆಗಳನ್ನು ನಡೆಸಿ, ಈ ಎಲ್ಲಾ ಸಂಸ್ಥೆಗಳು ಸ್ಥಗಿತಗೊಂಡವು.

ರಾಜ್ಯದ ಕಲಾ ಚಟುವಟಿಕೆಗಳು ಪುನಃ ಸೌತ್ ಕೆನರಾ ಆರ್ಟ್ ಕೌನ್ಸಿಲ್, ಕರ್ನಾಟಕ್ ಪೇಂಟರ್ಸ್‌ನಿಂದ ಮತ್ತು ಸಂಯೋಜಿತ ತಂಡಗಳಿಂದ ಪ್ರಾರಂಭವಾದವು.

ಈ ಪೀಳಿಗೆಯ ಕಲಾವಿದರಾದ ಆರ್.ಎಂ. ಹಡಪದ್, ಜಿ.ಎಸ್. ಶೆಣೈ, ಎಸ್.ಜಿ. ವಾಸುದೇವ, ವಿ.ಜಿ. ಸಿಂಧೂರ್, ವಿ.ಜಿ. ಅಂದಾನಿ, ಯೂಸಫ್, ಭಾಸ್ಕರ ರಾವ್, ಹಿರೇಗೌಡರ್, ಕಾಳಿದಾಸ ಪತ್ತಾರ್, ಎಂ.ಬಿ. ಪಾಟೀಲ, ಇ.ಕೆ. ಜನಾರ್ದನ, ಖಂಡೇರಾವ್, ಎಸ್. ಧನಲಕ್ಷ್ಮಿ, ಕಮಲಾಕ್ಷಿ ಮುಂತಾದವರು ಅನೇಕ ಪ್ರಯೋಗಗಳನ್ನು ನಡೆಸಿ, ತಮ್ಮ ಸ್ವಂತಿಕೆಯನ್ನು ರೂಢಿಸಿಕೊಂಡು ಮುಂದುವರೆಯುತ್ತಿದ್ದಾರೆ. ಜಿ.ಎಸ್. ಶೆಣೈ ಅವರ ನೇತೃತ್ವದ 'ಸೌತ್ ಕೆನರಾ ಆರ್ಟ್ ಕೌನ್ಸಿಲ್' ಗಮನಾರ್ಹವಾದ ಹಲವು ಕಲಾ ಪ್ರದರ್ಶನಗಳನ್ನು ನಡೆಸಿದೆ. ವೈಯಕ್ತಿಕವಾಗಿ ಹಲವು ಸಂಸ್ಥೆ ಮತ್ತು ಕಲಾವಿದರು ಕಲಾ ಚಟುವಟಿಕೆ ಮತ್ತು ಕಲಾ ಪ್ರದರ್ಶನ, ಕಲಾ ಶಿಬಿರಗಳ ಮೂಲಕ ಕೆಲಸ ಮಾಡಿದ್ದಾರೆ. ಇದರಿಂದ ಜನತೆಗೆ ಕಲೆಯಲ್ಲಿ ಆಸಕ್ತಿ ಬೆಳೆಯುವಂತೆ ಮಾಡಿದೆ.

ಸಂಯೋಜಿತ ಸಂಸ್ಥೆ ಪ್ರಾರಂಭದಲ್ಲಿ ಯುವ ಕಲಾವಿದರಿಂದ 70ರ ದಶಕದಲ್ಲಿ ಸ್ಥಾಪಿತವಾಗಿ ಇಂದು ಈ ಸಂಸ್ಥೆಯ ಕಲಾವಿದರಾದ ಎನ್. ಮರಿಶಾಮಾಚಾರ್, ಚಂದ್ರನಾಥ್ ಆಚಾರ್ಯ, ಶೀಲಾಗೌಡ, ಶ್ಯಾಮಸುಂದರ್, ರಾಮದಾಸ್, ಬಿ.ವಿ. ಸುರೇಶ, ಜೆ.ಎಂ.ಎಸ್. ಮಣಿ, ಜಯರಾಮ ಮುಂತಾದವರು ರಾಜ್ಯದಲ್ಲಿ ಸಮಕಾಲೀನ ಕಲೆಯಲ್ಲಿ ಹೊಸ ಅಲೆಗೆ ಕಾರಣಕರ್ತರಾಗಿದ್ದಾರೆ.

ಸಮಕಾಲೀನ ಕಲೆಗೆ ರಾಜ್ಯದ ಕಲಾ ಶಾಲೆಗಳು ಹೊಸ ಆಯಾಮ ನೀಡಿವೆ. ಅವುಗಳಲ್ಲಿ ಮುಖ್ಯವಾದುದು ಬೆಂಗಳೂರಿನ ಕೆನ್‌ಸ್ಕೂಲ್ ಆಫ್ ಆರ್ಟ್. ಇಲ್ಲಿ ಶಿಕ್ಷಣ ಪಡೆದ ಅನೇಕ ವಿದ್ಯಾರ್ಥಿಗಳು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಹೆಸರು ಪಡೆದಿದ್ದಾರೆ. ಗುಲ್ಬರ್ಗದ ಐಡಿಯಲ್ ಫೈನ್ ಆರ್ಟ್ ಇನ್‌ಸ್ಟಿಟ್ಯೂಟ್ ಮತ್ತು ಅನೇಕ ಕಲಾ ಶಾಲೆಗಳಿಂದ ಅನೇಕ ಕಲಾವಿದರು ಹೊರಬಂದಿದ್ದಾರೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಲಾ ಚಟುವಟಿಕೆಗಳು ಶ್ಲಾಘನೀಯ ಮತ್ತು ರಾಷ್ಟ್ರದಲ್ಲೇ ಉತ್ತಮವಾದ ಕಲಾಭವನವೊಂದಿದೆ. ಇವಲ್ಲದೆ ರಾಜ್ಯದ ವಿವಿಧ ಭಾಗಗಳಲ್ಲಿ ಅನೇಕ ಕಲಾ ಶಾಲೆಗಳು ಕಲೆಯಲ್ಲಿ ಶಿಕ್ಷಣ ನೀಡುತ್ತಿವೆ.

ಅಂತಾರಾಷ್ಟ್ರೀಯ ಮನ್ನಣೆ ಪಡೆದ ಕಲಾವಿದರಾದ ಕೆ.ಕೆ. ಹೆಬ್ಬಾರರು 1977ರಲ್ಲಿ ಕರ್ನಾಟಕ ಲಲಿತಾಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ, ಅಕಾಡೆಮಿ ಹೊಸ ರೂಪ ಪಡೆದು, ಅನೇಕ ಹೊಸ ಕ್ರಿಯಾತ್ಮಕ ಯೋಜನೆಗಳ ಮೂಲಕ ಕಾರ್ಯಕ್ರಮಗಳನ್ನು ರೂಪಿಸಿದರು. ಇದರಿಂದ ರಾಷ್ಟ್ರ ಮಟ್ಟದಲ್ಲಿ ಅನೇಕ ಕಲಾವಿದರು ಹೆಸರು ಪಡೆದರು. ಇವರ ಕಾಲದಲ್ಲಿ ಅನೇಕ ಯುವ ಕಲಾವಿದರು ಲಲಿತಾ ಕಲಾ ಅಕಾಡೆಮಿಯ ಶಿಷ್ಯ ವೇತನ ಪಡೆದು ಬರೋಡ ಶಾಂತಿ ನಿಕೇತನಗಳಿಗೆ ತೆರಳಿ, ಕಲೆಯಲ್ಲಿ ಶಿಕ್ಷಣ ಪಡೆದರು. ಶಿಕ್ಷಣ ಪಡೆದ ಅನೇಕ ಕಲಾವಿದರು ಇಂದು ಚಿತ್ರ, ಗ್ರಾಫಿಕ್, ಶಿಲ್ಪ ಹಾಗೂ ಕಲೆಯ ಮೂಲಕ ಸೃಜನಾತ್ಮಕವಾಗಿ ಬೆಳೆದಿದ್ದಾರೆ. ರಾಜ್ಯದಲ್ಲಿ 'ಕಲಾ ಮೇಳ'ದಂತಹ ಕಾರ್ಯಕ್ರಮಗಳು ನಡೆಯಲು ಹೆಬ್ಬಾರರು ಮಾರ್ಗದರ್ಶಿಗಳಾಗಿ, ಕಲೆಯ ಬಗ್ಗೆ ಜನ ಸಾಮಾನ್ಯರು ಗಮನ ಸೆಳೆದುದು ಅಲ್ಲದೆ, ರಾಷ್ಟ್ರ ಮಟ್ಟದಲ್ಲಿ ಹೆಸರು ಪಡೆಯಲು ಕಾರಣವಾಯಿತು.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಕಾರ್ಯಕ್ರಮಗಳು ರಾಜ್ಯದ ವಿವಿಧ ಭಾಗಗಳಲ್ಲಿ ಮತ್ತು ರಾಷ್ಟ್ರದ ಪ್ರಮುಖ ಸ್ಥಳಗಳಲ್ಲಿ ತನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ರಾಷ್ಟ್ರದ ಬೇರೆ ಯಾವುದೇ ಅಕಾಡೆಮಿಯು ಮಾಡದಿರುವಷ್ಟು ಕೆಲಸವನ್ನು ಪ್ರಕಟಣೆಗಳ ಮೂಲಕ ಸಾಧಿಸಿದೆ. ರಾಜ್ಯದಲ್ಲಿ ಇಂದು ಸಮಕಾಲೀನ ಕಲೆಯಲ್ಲಿ ಹೆಸರು ಮಾಡಿರುವ ಬಹುಪಾಲು ಕಲಾವಿದರು, ಅಕಾಡೆಮಿಯ ಶಿಷ್ಯ ವೇತನ ಪಡೆದು, ಹೊರ ರಾಜ್ಯದಲ್ಲಿ ಶಿಕ್ಷಣ ಪಡೆದವರು. ಈ ಕೀರ್ತಿ ಅಕಾಡೆಮಿಗೆ ಸಲ್ಲುತ್ತದೆ.

ರಾಷ್ಟ್ರೀಯ ಕಲಾ ಪ್ರದರ್ಶನಗಳಲ್ಲಿ ನಮ್ಮ ಕಲಾವಿದರು ತಮ್ಮ ಸೃಜನಾತ್ಮಕ ಕೃತಿಗಳಿಗೆ, ಪ್ರಶಸ್ತಿ ಪಡೆದಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದ ಕಲಾ ಪ್ರದರ್ಶನ 'ಟ್ರಿನಾಲೆ'ಯಲ್ಲಿ ಎನ್. ಪುಷ್ಪಮಾಲ ತಮ್ಮ ಶಿಲ್ಪಕೃತಿಗೆ ಪ್ರಶಸ್ತಿ ಪಡೆದು, ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಅಲ್ಲದೆ ರಾಷ್ಟ್ರದ ವಿವಿಧ ಭಾಗಗಳಲ್ಲಿ ನಡೆಯುವ ಅಖಿಲ ಭಾರತ ಕಲಾ ಪ್ರದರ್ಶನಗಳಲ್ಲಿ ನಮ್ಮ ಕಲಾವಿದರು ಪ್ರಶಸ್ತಿ ಗಳಿಸಿದ್ದಾರೆ.

ಗ್ರಾಫಿಕ್ ಕಲೆಯ ವಿವಿಧ ಮಾಧ್ಯಮಗಳಾದ ಎಚಿಂಗ್, ಲಿಥೋಗ್ರಾಫ್, ಸೆರಿ ಗ್ರಾಫ್, ಕೋಲೋಗ್ರಾಫ್ ಮುಂತಾದ ಮಾಧ್ಯಮಗಳಲ್ಲಿ ಪರಿಣಿತರಾದವರಿದ್ದಾರೆ. ಇಂದು ಸಮಕಾಲೀನ

ಕಲೆಯಲ್ಲಿ ಹೊಸ ಪೀಳಿಗೆಯ ಕಲಾವಿದರಾದ ಚಂದ್ರನಾಥ ಆಚಾರ್ಯ, ಸಿ. ಚಂದ್ರಶೇಖರ್, ಶಿವಪ್ರಸಾದ್, ಯು. ರಮೇಶ ರಾವ್, ಶೀಲಾ ಗೌಡ, ಎನ್. ಮರಿಶಾಮಾಚಾರ್, ಶ್ಯಾಮ ಸುಂದರ್, ಕೃಷ್ಣ ದೇವಾಡಿಗ, ವಿ.ಆರ್.ಸಿ. ಶೇಖರ್, ವಲ್ಲೀಶ್, ಚಿ.ಸು. ಕೃಷ್ಣ ಶೆಟ್ಟಿ, ಜೆ.ಎಂ. ಎಸ್. ಮಣಿ, ಬಿ.ವಿ. ಸುರೇಶ್, ಜಿ. ಜಯಕುಮಾರ್, ಎಂ.ಬಿ. ಲೋಹಾರ್, ಎಸ್. ಕೃಷ್ಣಪ್ಪ, ವಿಜಯ ಬಾಗೋಡಿ, ಬಸವರಾಜ ಮುಸವಳಿಗಿ, ರಾಮದಾಸ್, ಅ.ಲ. ನರಸಿಂಹನ್, ಪ.ಸ. ಕುಮಾರ್ ಈಶ್ವರ ಪತ್ತಾರ್, ಕೆ.ಎಸ್. ಶೇರಿಗಾರ್, ಮೋಹನ್ ಸಿತನೂರ್, ಬಸವರಾಜ ಜಾನಿ, ಕಿಶೋರ್ ಕುಮಾರ್, ಎಂ.ಸಿ. ಶೆಟ್ಟಿ, ಆರ್. ರಾಜು, ಎಂ.ಎಸ್. ಮೂರ್ತಿ, ಗಾಯತ್ರಿ ಗೌಡರ್, ರೇಣುಕಾ ಮಾರ್ಕಾಂಡೆ, ರವಿಕಾಶಿ, ಎ.ಎಂ. ಪ್ರಕಾಶ್, ಬಾಬು ಈಶ್ವರ್ ಪ್ರಸಾದ್, ಶಾಂತಾಮಣಿ, ಕೆ.ಬಿ. ಸುರೇಖಾ, ಪಿ.ಎಸ್. ಖಿಡೇಮನಿ, ಗುರುದಾಸ ಶೆಣೈ ಮುಂತಾದವರು ಚಿತ್ರ, ಗ್ರಾಫಿಕ್ ಮಾಧ್ಯಮಗಳಲ್ಲಿ ತಮ್ಮ ವೈಯಕ್ತಿಕತೆಯ ಮೂಲಕ ಸಮಕಾಲೀನ ಕಲೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ನಮ್ಮ ರಾಜ್ಯದ ಕಲಾವಿದರ ಕೃತಿಗಳಲ್ಲಿ ನೈಪುಣ್ಯತೆ ಹಾಗೂ ಹೊಸ ಹೊಸ ಆಕಾರ, ತಂತ್ರ, ಪ್ರಯೋಗಗಳನ್ನು ಜೋಡಿಸುವಂತಹ ಶಕ್ತಿ ತುಂಬಾ ಬೆಳೆದಿದೆ. ಅನೇಕ ಸಾಧನ ಸಾಮಗ್ರಿಗಳಿದ್ದರೂ ಅವನ್ನ ಇತಿಮಿತಿಗೊಳಿಸಲಾರದೆ ಬೌದ್ಧಿಕ ಸ್ವಾತಂತ್ರ್ಯದ ಜೊತೆಗೆ ಸಾಧನ ಸಾಮಗ್ರಿಗಳ ಚತುರತೆ, ನಿರೂಪಣಾ ಪದ್ಧತಿ ಸಮರ್ಪಕ ಸಮಯೋಚಿತವಾಗಿರುತ್ತದೆ. ಅಲ್ಲದೆ ಮಾನಸಿಕವಾಗಿ ಅನೇಕ ಕಾಣದ, ನಿಲುಕದ ವಸ್ತುಗಳನ್ನು ಕಲಾವಿದ ಇಂದು ತನ್ನ ಆಳವಾದ ವಿಚಾರದಿಂದ ಕಾಣುವ ಮನೋಧರ್ಮವನ್ನು ಹೊಂದಿದ್ದಾನೆ.

ಒಂದು ಕಾಲದಲ್ಲಿ ಸಾಧನ ಸಾಮಾಗ್ರಿ ಹಾಗೂ ಅಲಂಕರಣದಲ್ಲಿ ಒಂದು ದೇಶವನ್ನು ಮತ್ತೊಂದು ದೇಶದಿಂದ ಭಿನ್ನವಾಗಿ ಕಾಣಲು ಸಾಧ್ಯವಾಗುತ್ತಿತ್ತು. ಆದರೆ ಇಂದು ವಿಶ್ವದ ಕಲೆ ಸೃಜನಾತ್ಮಕವಾಗಿ ಬೆಳೆಯುವುದು, ಹಾಗೂ ವಿಶ್ವದ ಅನೇಕ ಕಲಾವಿದರ ಬೇಕು ಬೇಡಿಕೆಗಳು ಒಂದಾಗುತ್ತಿರುವುದು ಸ್ಪಷ್ಟವಾಗಿ ಕಾಣುತ್ತದೆ. ಕರ್ನಾಟಕ ಕಲಾವಿದರು ಕೂಡ ದೇಶದಲ್ಲಿ ಆದಂತಹ ಸಂಶೋಧಾನಾತ್ಮಕ ಹಾಗೂ ಭಾವಾತ್ಮಕ ವಿಚಾರಗಳನ್ನು ಹೇಳುವಲ್ಲಿ ಯಾವ ರಾಜ್ಯದ ಕಲಾವಿದನಿಗೂ ಕಡಿಮೆಯಿಲ್ಲ.

### ಭಾರತೀಯ ಶಿಲ್ಪಕಲೆ

### ಶಿಲ್ಪ ಮತ್ತು ವಿಶ್ವಕರ್ಮ

ಸಂಸ್ಕೃತ ಸಾಹಿತ್ಯದಲ್ಲಿ ಚಿತ್ರಕಲೆಗೆ ಸಂಬಂಧಿಸಿದ ವಿಪುಲ ಸಾಮಗ್ರಿ ಇದೆ. ಸಂಸ್ಕೃತದ ಮಹಾಕಾವ್ಯ, ಕಾವ್ಯ, ನಾಟಕ, ಕೋಶ, ಪುರಾಣ ಮುಂತಾದ ಅನೇಕ ಗ್ರಂಥಗಳ ಮೂಲಕ ಪ್ರಾಚೀನ ಚಿತ್ರಕಲೆಯ ಪರಂಪರೆ ಮತ್ತು ಅದರ ಜನಪ್ರಿಯತೆಯು ತಿಳಿದು ಬರುತ್ತದೆ. ಇದಲ್ಲದೆ ಸಂಸ್ಕೃತದಲ್ಲಿ ಚಿತ್ರಕಲೆಯ ವಿಧಿ-ವಿಧಾನಗಳಿಗೆ ಸ್ವತಂತ್ರವಾಗಿ ಮತ್ತು ವ್ಯಾಪಕವಾಗಿ ವ್ಯಾಖ್ಯೆ ನೀಡಿರುವ ಗ್ರಂಥಗಳೂ ಕೆಲವು ಇವೆ. ಆದರೆ ಈ ರೀತಿಯ ಲಕ್ಷಣ ಶ್ರೇಣಿಯ ಗ್ರಂಥಗಳು ಬೆರಳೆಣಿಕೆಯಷ್ಟಿವೆ. ಗ್ರಂಥಗಳಲ್ಲಿ, ಚಿತ್ರಕಲೆಯ ವಿಷಯಕ್ಕೆ ಒಂದು ಅಧ್ಯಾಯವನ್ನು ಮಾತ್ರ ಮೀಸಲಿರಿಸಿ, ಮಿಕ್ಕ ಎಲ್ಲ ಕಲೆಗಳನ್ನು ವಿಸ್ತಾರವಾಗಿ ವಿವೇಚಿಸಲಾಗಿದೆ. ಈ ರೀತಿಯ ಗ್ರಂಥಗಳ ಸಂಖ್ಯೆಯು ನಿಸ್ಸಂದೇಹವಾಗಿಯೂ ಹೆಚ್ಚು ಇದೆ. ಇವೇ ಗ್ರಂಥಗಳಲ್ಲಿ ಭಾರತೀಯ ಚಿತ್ರಕಲೆಯ ಲಾಕ್ಷಣಿಕ ಸ್ವರೂಪದ ಬಗ್ಗೆ ವಿಸ್ತಾರವಾಗಿ ವಿಚಾರ ಮಾಡಲಾಗಿದೆ.

ಚಿತ್ರಕಲೆಯ ವಿಧಿ-ವಿಧಾನಗಳ ಮೇಲೆ ಬೆಳಕು ಬೀರುವ ಬಹುತೇಕ ಅಂಶಗಳು ಶಿಲ್ಪಕ್ಕೆ ಸಂಬಂಧಪಟ್ಟ ಗ್ರಂಥಗಳಲ್ಲಿವೆ. ವೇದ, ಆಗಮ, ತಂತ್ರ, ಗೃಹಸೂತ್ರ, ಧರ್ಮಶಾಸ್ತ್ರ, ಅರ್ಥ ಶಾಸ್ತ್ರ, ಪಾಂಚರಾತ್ರ ಮತ್ತು ಪ್ರತಿಮಾ ವಿಜ್ಞಾನ ಮುಂತಾದ ಅನೇಕ ವಿಷಯಗಳ ಪ್ರಾಚೀನ ಮತ್ತು ಮಧ್ಯ ಕಾಲೀನ ಗ್ರಂಥಗಳಲ್ಲಿ ಭಾರತೀಯ ಶಿಲ್ಪಕ್ಕೆ ಸಂಬಂಧಿಸಿದ ಸಾಮಗ್ರಿಗಳು ವ್ಯಾಪಕವಾಗಿ ದೊರೆಯುತ್ತದೆ.

'ಮತ್ಸ್ಯ ಪುರಾಣ'ದಲ್ಲಿ ಭಾರತೀಯ ಶಿಲ್ಪದ ಜನಕರೆಂದು ಈ ಮುಂದಿನ 18 ಜನ ವಾಸ್ತು ಶಿಲ್ಪದ ಪುರಾತ ಆಚಾರ್ಯರನ್ನು ಹೆಸರಿಸಲಾಗಿದೆ. 1) ಭೃಗು, 2) ಅತ್ರಿ, 3) ವಶಿಷ್ಠ, 4) ವಿಶ್ವಕರ್ಮ, 5) ಮಯ, 6) ನಾರದ, 7) ನಗ್ನಜಿತ್, 8) ವಿಶಾಲಕ್ಷ, 9) ಪುರಂದರ, 10) ಬ್ರಹ್ಮಾ, 11) ಕುಮಾರ, 12) ನಂದೀಶ, 13) ಶಾನಕ, 14) ಗರ್ಗ, 15) ವಾಸುದೇವ, 16) ಅನಿರುದ್ಧ, 17) ಶುಕ್ರ ಮತ್ತು 18) ಬೃಹಸ್ಪತಿ. ಈ ಹದಿನೆಂಟು ಆಚಾರ್ಯರ ಹೆಸರುಗಳಲ್ಲಿ ವಿಶ್ವಕರ್ಮನ ಹೆಸರು ಉಲ್ಲೇಖನೀಯ. ಪುರಾಣ, ಅರ್ಥ ಶಾಸ್ತ್ರ ಮತ್ತು ಶಿಲ್ಪಶಾಸ್ತ್ರ ಗ್ರಂಥಗಳಲ್ಲಿ ವಿಶ್ವಕರ್ಮನನ್ನು ನಿಷ್ಠೆಯಿಂದ ಸ್ಮರಿಸಲಾಗಿದೆ. ಬ್ರಾಹ್ಮಣ, ಉಪನಿಷತ್ತು, ವೇದಾಂತ ಮತ್ತು ಇತರ ದಾರ್ಶನಿಕ ಗ್ರಂಥಗಳಲ್ಲಿ ಉಲ್ಲೇಖಿಸಲಾದ ಸೃಷ್ಟಿಕರ್ಮ ಮತ್ತು ಅಪರನಾಮ ವಿಶ್ವಕರ್ಮ ಇಬ್ಬರು ಬೇರೆಯಾಗಿದ್ದು ವಿಶ್ವಕರ್ಮನು ಶಿಲ್ಪ ಶಾಸ್ತ್ರದ ಸಿದ್ಧಾಂತಗಳ ಪ್ರಥಮ ಪ್ರತಿನಿಧಿಯಾಗಿರುವುದರಿಂದ ವಿಶ್ವಕರ್ಮನ ಪೂಜೆಯು ಇಂದಿಗೂ ಪ್ರತಿ ವರ್ಷ ನಡೆಯುತ್ತಿದೆ. ಅವನಿಗೆ ಈ ಲೋಕಪ್ರಿಯತೆಯು ಗುಪ್ತ ಯುಗದಿಂದಲೂ ಪ್ರಾಪ್ತವಾಗಿದ್ದು ಆ ಸಮಯದಲ್ಲಿ ಅವನು ಶಿಲ್ಪ ಶಾಸ್ತ್ರದ ಅಪೂರ್ವ ಆಚಾರ್ಯರ ರೂಪದಲ್ಲಿ ವಿಖ್ಯಾತರಾಗಿದ್ದನು. ಇತರ ಹದಿನೇಳು ಜನ ಆಚಾರ್ಯರರಂತಲ್ಲದೆ, ವಿಶ್ವಕರ್ಮನ ಪ್ರಸಿದ್ಧಿಯ ಇನ್ನೊಂದು ಕಾರಣವೆಂದರೆ, ಶಿಲ್ಪಕ್ಕೆ ಸಂಬಂಧಿಸಿದಂತೆ ಹೊಸ ವೈಜ್ಞಾನಿಕ ಆವಿಷ್ಕಾರಗಳನ್ನು ಮತ್ತು ಜನಪ್ರಿಯ ಪದ್ಧತಿಗಳನ್ನು ಈತ ಪ್ರಚಲಿತಗೊಳಿಸಿದನು.

'ಮಾನಸಾರ' ಎಂಬ ಹೆಸರಿನ ಶಿಲ್ಪ ವಿಷಯಕ್ಕೆ ಸಂಬಂಧಿಸಿದ ಗ್ರಂಥದಲ್ಲಿ ವಿಶ್ವಕರ್ಮನನ್ನು ಬ್ರಹ್ಮನ ಮಾನಸಪುತ್ರ ಎಂದು ಕರೆಯಲಾಗಿದೆ. ಬ್ರಹ್ಮನು ತನ್ನ ನಾಲ್ಕು ಮುಖಗಳಿಂದ ನಾಲ್ಕು ಜನ ಸ್ಥಪತಿ (ವಾಸ್ತು ಶಿಲ್ಪಿ)ಗಳಿಗೆ ಜನ್ಮ ನೀಡಿದ್ದು, ಅವರಲ್ಲಿ ವಿಶ್ವ ಕರ್ಮನಿಗೆ ಪ್ರಥಮ ಸ್ಥಾನ. ಅವನು ದೇವತೆಗಳ ಶಿಲ್ಪಿಯಾಗಿದ್ದನು. ಪುರಾಣದಲ್ಲಿ ಅವನ ತಂದೆಯ ಹೆಸರನ್ನು ಪ್ರಭಾಸ ಎಂದು ಉಲ್ಲೇಖಿಸಿರುವುದು ತಿಳಿದು ಬರುತ್ತದೆ. ರಾಜರ ಪ್ರಾಸಾದ (ಅರಮನೆಯ ಭವನ)ಗಳಲ್ಲಿ, ಉದ್ಯಾನ-ಉಪವನಗಳು, ಮೂರ್ತಿಗಳು, ಸರೋವರಗಳು ಮತ್ತು ಕೂಪ ಇತ್ಯಾದಿಗಳ ನಿರ್ಮಾತೃವಿನ ರೂಪದಲ್ಲಿ ಅವನನ್ನು ಗೌರವಿಸಲಾಯಿತು.

ಆಚಾರ್ಯ ಭರತನ 'ನಾಟ್ಯ ಸೂತ್ರ'ದಿಂದ ವಿಶ್ವಕರ್ಮನು ಬ್ರಹ್ಮನ ಆದೇಶದ ಮೇರೆಗೆ ಒಂದು ಸುಂದರ ನಾಟ್ಯ ಶಾಲೆಯನ್ನು ನಿರ್ಮಿಸಿ ತನ್ನ ಅದ್ಭುತ ಕೌಶಲದ ಪರಿಚಯವನ್ನು ಮಾಡಿದ್ದಾನೆಂದು ತಿಳಿದುಬರುತ್ತದೆ. ರಾವಣನ ಅನುಪಮ ಲಂಕಾಪುರಿಯ ನಿರ್ಮಾತೃವೂ ವಿಶ್ವಕರ್ಮ ಎಂದೇ ಹೇಳಲಾಗುತ್ತದೆ. ಬ್ರಹ್ಮನ 'ದ್ವಿವಿರಥ ಪುಷ್ಪ'ವನ್ನೂ ಇವನೇ ನಿರ್ಮಾಣ ಮಾಡಿದ್ದಾನೆಂದೂ ಗಿರಿರಾಜನಾದ ಹಿಮವಂತನ ಆಗ್ರಹದ ಮೇರೆಗೆ ಅವನು ಒಂದು ಸುಂದರ ಸಭಾಭವನವನ್ನು ನಿರ್ಮಿಸಿದ್ದು, ಅದರಲ್ಲಿ ಅಲ್ಲಲ್ಲಿ, ಕುದುರೆಗಳು, ನವಿಲುಗಳು ಮತ್ತು ಜಿಂಕೆಗಳ ದಿವ್ಯ ಆಕೃತಿಗಳನ್ನು ಚಿತ್ರಿಸಲಾಗಿರುವುದರ ಜೊತೆಗೆ ಅನೇಕ ದೇವತಾ ಮೂರ್ತಿಗಳನ್ನು ನಿರ್ಮಿಸಿದ್ದಾನೆಂದು ತಿಳಿದು ಬರುತ್ತದೆ.

ವಿಶ್ವಕರ್ಮನು ಅದ್ಭುತ ಶಿಲ್ಪಿಯಾಗಿದ್ದನಲ್ಲದೆ, ಅಸಾಮಾನ್ಯ ಲೇಖಕನೂ ಆಗಿದ್ದನು. ಶಿಲ್ಪಶಾಸ್ತ್ರ ವಿಷಯವಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದ ಅವನನ್ನು 'ವಿಶ್ವಕರ್ಮ ಪ್ರಕಾಶ'ದ ನಿರ್ಕರ್ತೃ ಎಂದು ತಿಳಿಯಲಾಗಿದೆ. ಈ ಗ್ರಂಥವು ಈಗ ಸಂಸ್ಕರಿಸಲ್ಪಟ್ಟಿದ್ದು ಉಪಲಬ್ಧವಿದೆ. ವಿಶ್ವಕರ್ಮನು ಮಹಾಜ್ಞಾನಿಯಾಗಿದ್ದನು ಮತ್ತು ಸ್ವಭಾವದಿಂದ ಮಹಾತ್ಮನಾಗಿದ್ದನು ಎಂಬುದು ಗ್ರಂಥದಿಂದ ತಿಳಿದು ಬಂದಿದೆ. ಲೋಕಹಿತವೇ ಈ ಗ್ರಂಥ ನಿರ್ಮಾಣದ ಉದ್ದೇಶ ಎಂದು ಸ್ವತಃ ಅವನೇ ಹೇಳಿಕೊಂಡಿದ್ದಾನೆ.

# ಕೈಲಾಸಂ ಸ್ಮರಣೆ

'ಕೈಲಾಸಂ ಒಂದು ವ್ಯಕ್ತಿಯಲ್ಲ, ಶಕ್ತಿ' ಎಂದರು ಅಭಿಮಾನಿಗಳು. 'ಕನ್ನಡಕ್ಕೊಬ್ಬನೇ ಕೈಲಾಸಂ' ಕನ್ನಡ ಪ್ರಹಸನ ಪ್ರಪಿತಾಮಹ' ಇವು ಅಭಿಮಾನಿಗಳಿಂದ ಕೈಲಾಸಂಗೆ ಬಂದ ಬಿರುದುಗಳು. ಕೈಲಾಸಂ ಎಂದೊಡನೆ ಕನ್ನಡ ನಾಟಕ ರಂಗ ನಮ್ಮ ಕಣ್ಮುಂದೆ ನಿಲ್ಲುತ್ತದೆ. 19ನೇ ಶತಮಾನದ ಕೊನೆಯ ಭಾಗವನ್ನು ನಾಟಕದ ಪುನರುದಯದ ಕಾಲವೆಂದು ಹೇಳಬಹುದು. ಪೌರಾಣಿಕ ನಾಟಕಗಳೇ ಅಧಿಕವಾಗಿದ್ದು ಅಂದಿನ ಸುಪ್ರಸಿದ್ಧ ನಟರಾದ ವರದಾಚಾರ್ಯರು. ಗುಬ್ಬಿ ವೀರಣ್ಣನವರು, ಮಹಮ್ಮದ್ ಪೀರ್, ಗರೂಡ ಸದಾಶಿವರಾಯರು, ರಂಗನಾಥ' ಭಟ್ಟರು ಮುಂತಾದವರ ನಟರ ಪ್ರತಿಭೆಯ ಕಾರಣದಿಂದಾಗಿ ನಾಟಕಕಾರ ಎನ್ನುತ ಸ್ಥಾನಕ್ಕೆ ಆ ಕಾಲದಲ್ಲಿ ಬರಲು ಸಾಧ್ಯವಾಗಲಿಲ್ಲ. ಪ್ರತಿಭಾವಂತ ನಟನ ಹಿಮ್ಮೇಳನವಾಗಿರುವುದಷ್ಟೇ ಅವನ ಕರ್ತವ್ಯವಾಗಿತ್ತು. ನಾಟಕಕಾರನ ಗುಣ ಸ್ಥಾನಕ್ಕೆ ಬದಲಾಯಿಸಿ ಅವನನ್ನು ರಂಗ ಮಂದಿರದ ಪ್ರಧಾನ ವ್ಯಕ್ತಿಯನ್ನಾಗಿ ಮಾಡಿ ನಾಟಕದಲ್ಲಿ ಸಾಮಾಜಿಕ ನಾಟಕಗಳ ಯುಗವನ್ನಾರಂಭಿಸಿದ ಕೀರ್ತಿ ಕೈಲಾಸಂ ಅವರಿಗೆ ಸಲ್ಲುತ್ತದೆ.

ಸುಪ್ರಸಿದ್ಧ ಕಾಯಿದೆ ಪಂಡಿತ ಪರಮಶಿವ ಅಯ್ಯರ್ ಮತ್ತು ಕಮಲಮ್ಮ ಇವರಲ್ಲಿ 1885ರಲ್ಲಿ ಜನಿಸಿದ ಕೈಲಾಸಂ, ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಮುಗಿಸಿ ಉಚ್ಚ ಶಿಕ್ಷಣಕ್ಕೆ ಲಂಡನ್ನಿಗೆ ತೆರಳಿ ಆರು ವರ್ಷಗಳ ಕಾಲ ಲಂಡನ್ ರಾಯಲ್ ಕಾಲೇಜ್ ಆಫ್ ಸಯನ್ಸ್‌ನಲ್ಲಿ ಭೂಗರ್ಭ ಶಾಸ್ತ್ರ ಅಧ್ಯಯನ ಮಾಡಿ ಪ್ರೌಢ ಪ್ರಶಸ್ತಿಯನ್ನು ಪಡೆದರು. ಶಿಕ್ಷಣ ಮುಗಿಸಿ ಹಿಂದಿರುಗಿದ ಕೈಲಾಸಂಗೆ ಸರಕಾರದಲ್ಲಿ ಉನ್ನತ ಅಧಿಕಾರವೂ ಸಿಕ್ಕಿತು. ಆದರೆ ಆ ಅಧಿಕಾರ ಅವರ ರಕ್ತಕ್ಕಂಟಲಿಲ್ಲ. ಕೆಲವು ವರ್ಷಗಳ ಬಳಿಕ ಸರಕಾರೀ ಸೇವೆಗೆ ತಿಲಾಂಜಲಿ ಅರ್ಪಿಸಿ ತಲೆಯ ಮೇಲಿದ್ದ ದಾಸ್ಯದ ಸಿಂಬೆಯನ್ನು ಇಳಿಸಿ ಕನ್ನಡ ನಾಟ್ಯ ರಂಗದ ಕಿರೀಟವನ್ನು ಧರಿಸಿದರು.

1918ರಲ್ಲಿ ಪ್ರಥಮ ರಚನೆಯಾಯಿತು 'ಟೊಳ್ಳು ಗಟ್ಟಿ'. ಆಯಿತು ನಾಟಕ ರಂಗದಲ್ಲಿ ಸಾಮಾಜಿಕ ಕ್ರಾಂತಿ. ಬೀದಿಯಲ್ಲಿ, ಮನೆಯಲ್ಲಿ ಜನ ಮಾತನಾಡುವಾಗ ಬಳಸುವ ಭಾಷೆ, ಅದೇ ಜನ ನಾಟಕದಲ್ಲಿ ಬಂದು ಮಾತನಾಡಿದರೆ ಅವರ ಭಾಷೆ ಹೇಗೆ ಬದಲಾದೀತು ಎಂಬ ಕಲ್ಪನೆಯಿಂದ ಸಾತು, ಪಾತು, ನಾಗತ್ತೆಗಳನ್ನು ಸೃಷ್ಟಿಸಿ ಅವರು ನಿತ್ಯ ಜೀವನದಲ್ಲಿ ಬಳಸುವ ಭಾಷೆಯನ್ನು ರಂಗದ ಮೇಲೆ ಬಳಸಿದಾಗ ಮಡಿವಂತರ ಟೀಕೆಗೆ ಗುರಿಯಾದರೂ ಮುಂದೆ ನಾಟಕ ಆಡಿದಂತೆಲ್ಲಾ ಜನಪ್ರಿಯವಾಗುತ್ತಾ ಟೊಳ್ಳುಟೊಳ್ಳಾಗಿ, ಗಟ್ಟಿ ಗಟ್ಟಿಯಾಗೇ ನಿಂತಿತಂತೆ.

### ಕೈಲಾಸಂ ನಾಟಕಗಳ ಅವಲೋಕನ

'ಭಾಗೀರಥಮ್ಮ ಹೇಳಿದ್ಹಾಗೆ ಈ ಭೂಮೀಲಿ ಜೀವಿಸೋಕೆ ದೇವರಿಗೆ ನಾವು ಕೊಡೋ ಬಾಡಿಗೆ ಎಂದರೆ ಸುತ್ತಮುತ್ತಲೂ ಇರೋ ಜನರಿಗೆ ಉಪಯೋಗವಾಗಿರೋದೇ ಎಂಬ ಉದ್ದೇಶದಿಂದ ನಮ್ಮ ಮಕ್ಕಳನ್ನು ಸಾಕಿ ಅವರ ಗುಣಗಳ್ನ ಬಿತ್ತಿ ಬೆಳೆಸಿ, ನಮ್ಮ ಮಕ್ಕಳ ಸ್ವಭಾವದಲ್ಲಿರೋ ಗುಣಗಳನ್ನು



ಹೊರಕ್ಕೆಳೆಯುವ ವಿದ್ಯಾಭ್ಯಾಸದ ಕ್ರಮವೊಂದನ್ನೇ ಪಡಿಸಿ ಅದನ್ನನುಸರಿಸಿದ್ರೆ ನಮ್ಮ ದೇಶದ ಏಳ್ಗೆ ಎಂಬ ಯೋಚ್ನೆ ಕುಂಬಳ್ಕಾಯಷ್ಟು ಲ್ಲಿಲ್ಲದಿದ್ರೂ, ರಾಗೀಕಾಳ್ನಷ್ಟಾದರೂ ತಮ್ಮಗಳ ಮನಸ್ಸಿಗೆ ನಾಟಿದರೆ ನನ್ನ ಪ್ರಥಮ ಪ್ರಯತ್ನ ವ್ಯರ್ಥವಲ್ಲ' ಎಂದು ಟೀಕೆ ಮಾಡಿದವರಿಗೆ ಉತ್ತರಿಸಿ ಮಕ್ಕಳ ಸ್ವಭಾವದಲ್ಲಿರುವ ಗುಣಗಳನ್ನು ಹೊರಕ್ಕೆಳೆಯುವ ಶಿಕ್ಷಣ ಕ್ರಮ ಬೇಕೆಂದು ಕೈಲಾಸಂ 'ಟೊಳ್ಳು ಗಟ್ಟಿ'ಯಲ್ಲಿ ಪ್ರತಿಪಾದಿಸಿದ್ದಾರೆ.

'ಮೈದಾನದಲ್ಲಿ ಹೆಬ್ಬುಲಿ, ಮನೆಯಲ್ಲಿ ಮೂಗಿಲಿ' ಎಂದು ಹೆಸರಾಂತ ಲಾಯರ್ ರಾಮಣ್ಣ ಮನೆಯಲ್ಲಿ ಹೆಂಡತಿ ಮತ್ತು ತಾಯಿ ಇವರ ಜಗಳ ಉಲ್ಬಣಾವಸ್ಥೆಗೆ ಏರಿದಾಗ ತಾನು ವಿಧಿಯಿಲ್ಲದೆ ಹೆಂಡತಿ ಕಡೆ ವಕಾಲತ್ತು ವಹಿಸಿ ತಾಯಿಗೆ Lecture ಕೊಟ್ಟು ವೈರಾಗ್ಯದ ಕಡೆ ತಿರುಗಿಸಲೆತ್ನಿಸಿದಾಗ ಸೋತ ತಾಯಿ ವಿಧವೆ ಸುಬ್ಬಮ್ಮ ಕಣ್ಣೀರಿಡುತ್ತಾ ಸುಮ್ಮನಾಗುತ್ತಾಳೆ. ಮಗ ಬೇಕೆಂದು ಹಂಬಲಿಸಿ ಹರಕೆ ಹೊತ್ತು, ಹೆತ್ತು, ಪೊರೆದು ಪೋಷಿಸಿ ಕೊನೆಗೆ ಸೊಸೆಯೆನಿಸಿಕೊಂಡ ಅಣ್ಣಮ್ಮಗಳಿಗೆ ಆಹುತಿ ಅರ್ಪಿಸೋ ತಾಯಂದಿರ ಸಂಕಟವನ್ನು ನಿರೂಪಿಸಿ ಸಮಾಜದ ಒಂದು ಸಜೀವ ಚಿತ್ರದ ರೂಪುರೇಷೆಯನ್ನು ಕೈಲಾಸಂ 'ಹೋಂರೂಲು'ನಲ್ಲಿ ನಿರ್ವಹಣ ಮಾಡಿದ್ದಾರೆ.

'Early Childhoodನಲ್ಲಿದ್ದ Mother's influence ಏ Later on Manhoodನಲ್ಲಿ Man's charcter & Destiny ಮುಂದಕ್ಕವನು ಏನಾಗ್ತಾನೋ Good Man ಓ.... Brute ಓ.... Scoudrel ಓ.... Saint ಓ.... ಇಲ್ಲಾ Patriot ಓ..... ಅದೆಲ್ಲಾ ನಿನ್ನ ಕೈಲೇ ಇದೆ. ಅಮ್ಮಾ ಅಮ್ಮಾ ಅನ್ನೋ ಈಗ್ನಿಂದ.... ಆ Master ಕೈಲಿ Educate ಮಾಡೋಕೆ ಕಳ್ಸೋ ಈ ಆರೇಳು ವರ್ಷದಲ್ಲಿ ಇದಾಗ್ಲಿ ಇಲ್ಲಾ ಅದಾಗ್ಲಿ Decide ಮಾಡೋ ಜವಾಬ್ದಾರಿ ಎಲ್ಲಾ ನಿನ್ನ ಕೈಲೇ ಇದೆ' ಎಂದು ಸರೋಜಳಿಗೆ ಕಮಲು ಕೈಲಿ ಉಪದೇಶ ಮಾಡಿಸಿದ ಕೈಲಾಸಂ ಹೆಣ್ಣಿನ ಸ್ಥಾನ ಮನೆಕಟ್ಟಿ ಬೆಳಸೋದು, ಗಂಡಿನ ಸ್ಥಾನ ನಾಡು ಕಟ್ಟಿ ಬೆಳಸೋದು, Equal Rightsನ ಹೊಡೆದಾಟ ಅನವಶ್ಯಕ, ಸಂಸಾರ ರಥವನ್ನು ಸಾಗಿಸುವ Equal Rights ಇಬ್ಬರಿಗೂ ಇದೆ. Motherhood ಜವಾಬ್ದಾರಿ... ಅದಕ್ಕೆ Equal Rights ಎಲ್ಲಿದೆ? Rightsoo, Qualificationsoo, Motherಗೆ ಇರೋ ಹಾಗೆ Husbandಗೆ ಎಲ್ಲಿದೆ ಎಂದು ತಿಳಿಸಿ ಸಂಸಾರದಲ್ಲಿ ಒಬ್ಬರನ್ನೊಬ್ಬರು ಅರ್ಥ ಮಾಡಿಕೊಂಡು ಗೌರವ, ಪ್ರೇಮದಿಂದ ವರ್ತಿಸಬೇಕೆಂದು ಸಾರಿದ್ದಾರೆ 'ಅಮ್ಮಾವ್ರ ಗಂಡ' ನಾಟಕದಲ್ಲಿ.

ಸೇವೆಯ ಗುರುತು ಹೊರಗಿನ ಲಾಂಛನವಲ್ಲ, ಒಳಗಿನ ಸೇವಾ ವೃತ್ತಿ, ಪ್ರದರ್ಶನವಲ್ಲ ಆತ್ಮಾರ್ಪಣ ಎಂಬ ತತ್ವವನ್ನು ಪೋಲಿ ಕಿಟ್ಟಿ ನಾಟಕದಲ್ಲಿ ಯಶ್ವಿಯಾಗಿ ಕೈಲಾಸಂ ಸಾಧಿಸಿದ್ದಾರೆ.

ಜಗತ್ತಿನ ಅತ್ಯಂತ ಪುರಾತನ ವೃತ್ತಿಯ ರುದ್ರ ಭೀಕರ ಚಾರಿತ್ರ್ಯದ ವಸ್ತುವನ್ನು ಆರಿಸಿಕೊಂಡು ರಚಿಸಿರುವ ನಾಟಕ 'ಸೂಳೆ'. ಪತಿತೆಯರನ್ನು ಪಾಪ ಮಾರ್ಗದಿಂದ ಸನ್ಮಾರ್ಗಕ್ಕೆ ತಿರುಗಿಸಿ ಅವರಿಗೆ ನ್ಯಾಯವಾದ ವೃತ್ತಿಗಳನ್ನು ಕಲ್ಪಿಸಿಕೊಡಲು ಹೊರಟಿರುವ ದೊಡ್ಡ ಜೀವ ವೈಶ್ಯೋದ್ಧಾರ ಸಂಘದ ಅಧ್ಯಕ್ಷಿಣಿ ಲೇಡಿ ಶಿವದಾಸ ಅಯ್ಯರ್ 'ಗಂಡಸಿನ ಭೋಗಕ್ಕೆ ತಾಳಿ ಕಟ್ಟಿಸ್ಕೊಂಡು ಬೀಳೋ ತುತ್ತು ನೀವು. ತಾಳಿ ಕಟ್ಟಿಸ್ಕೊಳ್ಳದೇನೆ ಬೀಳೋ ತುತ್ತು ನಾವು. ಈ ಗಂಡ್ಸನ್ನ ನಮ್ಮ ಹಾಗೆ ತೃಪ್ತಿ ಪಡಿಸದೇ ಇರೋ ಇವನ ಪತ್ನಿಗಳು ಎಷ್ಟು ದುಡ್ತಾನೇ ಏರ್ಚಿ ಎಷ್ಟು ಕಮಿಟಿಗಳನ್ನು ಏರ್ಪಡಿಸಿದ್ರೂನೂವೆ ಏಳ್ಗೆ ಎಲ್ಲಿದೆ ಅಮ್ಮ ನಮ್ಮ ನಿಮ್ಮಿಂದ ಎಂದು ವಾದಿಸಿ, ಲೇಡಿ

ಶಿವದಾಸ್ ಅಯ್ಯರ್ ಹಾಗೂ ಅವರ ಬೆಂಬಲಕ್ಕೆ ನಿಲ್ಲುವ ಸಮಾಜ ವೇಶ್ಯಾವೃತ್ತಿಗೆ ಕಾರಣ. ಪತಿತರಾದ ಗಂಡಸರು ಮೊದಲು ಉದ್ಧಾರವಾದರೆ ಹೆಂಗಸರು ಉದ್ಧಾರವಾಗುತ್ತಾರೆ, ವೇಶ್ಯಾ ಸಮಸ್ಯೆ ತಾನೇ ತಾನಾಯಿ ಪರಿಹಾರವಾಗುತ್ತದೆ ಎನ್ನುವ ವಿವೇಚನೆಯನ್ನು ತಮ್ಮ 'ಸೂಳೆ' ನಾಟಕದ ಮೂಲಕ ಸಮಾಜದ ಮುಂದೆ ಇಟ್ಟಿದ್ದಾರೆ.

ಪ್ರಾಚೀನ ಮಾರ್ಗದ ಕನ್ನಡ ರಂಗ ಭೂಮಿಯನ್ನು ಸ್ವಾರಸ್ಯವಾಗಿ ಅಣಕವಾಡಿದ್ದಾರೆ. 'ನಂಕಂಪನಿ' ನಾಟಕದ ಮೂಲಕ. ಅಸಂಸ್ಕೃತ ನಟರು, ಅಧ್ವಾನ ನಾಟಕಗಳು, ನಟರಿಗಿಂತ ಅಸಂಸ್ಕೃತ ಪ್ರೇಕ್ಷಕ ವರ್ಗ ಇವರ ಕೈಲಿದ್ದ ರಂಗ ಭೂಮಿಯ ವಿಗಡ ಚಿತ್ರವನ್ನು ರಸವತ್ತಾಗಿ ವಿಡಂಬನೆ ಮಾಡಿದ್ದಾರೆ. ನಾಟಕ ಕೊನೆಯಲ್ಲಿ ರಚಿಸಿರುವ 'ಕಂಪೆನಿಯ ಬದುಕಿಸೋ, ಕಾಂಪ್ಲಿಮೆಂಟರಿ ಕಟಾಯಿಸಿ, ಕುರಿಗಳ ಜಮಾಯಿಸಿ, ಕಲೆಕ್ಷನ್ ಘನಪಡಿಸಿ, ಕಂಪೆನಿಯ ಬದುಕಿಸೋ' ಮಂಗಳವನ್ನು ನಟರೆಲ್ಲರೂ ಹಾಡುವಾಗ ವಿಡಂಬನೆಯಾದರೂ ಕನ್ನಡ ನಾಟಕ ಕಂಪೆನಿಗಳ ಕರುಣಾಜನಕ ಸ್ಥಿತಿಯನ್ನು ಸೂಚಿಸುತ್ತದೆ. ಇಂದಿಗೂ ಹಾಗೆ ಇದೆಯೆಂದರೆ ಉತ್ಪ್ರೇಕ್ಷೆಯಲ್ಲ.

## ಗುಂಡೂ ಭಂಡಾರ

ಟೊಳ್ಳುಗಟ್ಟಿ ಪ್ರಕಟವಾದಾಗ ಕೈಲಾಸಂ 'ಗುಂಡೂ' ಎಂಬ ಕಾವ್ಯ ನಾಮವನ್ನು ಉಪಯೋಗಿಸಿದರು. ಅರಿಂದಾಗಿ ಅಲ್ಲಿಂದ ಮೊದಲು ಅವರ ಬರೆದುದೆಲ್ಲಾ 'ಗುಂಡು ಭಂಡಾರ'ವೆಂದು ಹೆಸರಾಯಿತು. ಈ ಭಂಡಾರದ ಸ್ವತ್ತೆಂದರೆ 17 ದೊಡ್ಡ ನಾಟಕಗಳು, 5 ಸಣ್ಣ ನಾಟಕಗಳು, 7 ಕವನಗಳು, ಅಲ್ಲದೇ Karna, Purpose, Fulfilment ಮುಂತಾದ ಇಂಗ್ಲೀಷ್ ನಾಟಕಗಳು. ಇದಲ್ಲದೇ ಅಪ್ರಕಟಿತವಾದ ಹಸ್ತ ಪ್ರತಿಗಳು ಅನೇಕ. ಎಲ್ಲವನ್ನೂ ಕೈಲಾಸಂ ಸ್ವತಹ ತಮ್ಮ ಕೈಯಿಂದ ಬರೆದುದಲ್ಲ. ಮಿತ್ರರನೇಕರು, ಅಭಿಮಾನಿಗಳು ಅವರೊಡನೆ ಇದ್ದು ಕೈ ಲಾಸಂ ಹೇಳಿದಾಗ ಬರೆದುಕೊಂಡದ್ದು. ಕೈಲಾಸಂ ಕೂತ್ಕಡೆ ಕಂಪ್ನಿ ನಿಂತ್ಕಂಡೆ ನಾಟ್ಕ ಆಗ್ತಿತ್ತು. ಹಾಸ್ಯಪ್ರಿಯ, ಪ್ರಾಸಪ್ರಿಯ, ಕೈಲಾಸಂ ಹೇಳಿದ್ದೆಲ್ಲಾ ಬರೆದಿಟ್ಟುಕೊಂಡಿದ್ದರೆ ಅವರ ಹರಟೆಗಳನ್ನು ಸಂಗ್ರಹಿಸಿದ್ದರೆ ಅವು ಅಮೂಲ್ಯ ಸಾಹಿತ್ಯ ವಾಗುತ್ತಿತ್ತೆಂದು ತಜ್ಞರ ಅಭಿಪ್ರಾಯ.


**TRIMURTI**
**JEWELLERS**
GOLD AND DIAMOND ORNAMENTS
460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.
Phone : **402 34 85**


---

## ಮೇಘ ಪ್ರತಿ ಸಂದೇಶ
## ಕಾವ್ಯ ಚಿಂತನ ಕಾರ್ಯಕ್ರಮ

ಪರಂಪರೆಯ ಹಿನ್ನೆಲೆಯಲ್ಲೂ ಕಾವ್ಯವನ್ನು ಅಭ್ಯಸಬೇಕು. ಇಂದು ನಾವು ನಮ್ಮ ಕಾವ್ಯ ಕೃತಿಗಳನ್ನು ಅಭ್ಯಸಿಸುವ ಸಂದರ್ಭದಲ್ಲಿ ಬರೆ ಪಶ್ಚಿಮ ಮುಖಿಗಳಾಗಿಬಿಟ್ಟಿದ್ದೇವೆ. ಇದು ತರವಲ್ಲ. ಪ್ರಕೃತಿಯನ್ನು ಕಾವ್ಯ ಹೊಸತಲ್ಲ ಕಾಲಿದಾಸ, ವ್ಯಾಸ, ವಾಲ್ಮೀಕಿಯರು ಈ ಪರಂಪರೆಯಲ್ಲಿ ಹೊಸ ಹಾದಿಯನ್ನು ತೆರೆದು ತೋರಿದರು. ಆ ಚೇತನ ವಸ್ತುವನ್ನು ಚೇತನಗೊಳಿಸಿ ಕಾವ್ಯ ಹೊಳಗೆ ತಂದು ರಸಿಕರ ಗಮನ ಸೆಳೆದ ನಮ್ಮ ಕವಿಗಳ ಸಾಧನೆ ಅಸಮಾನ್ಯವಾದುದು. ಮೇಘ ಪ್ರತಿ ಸಂದೇಶ ಒಂದು ಉತ್ತಮ ಕಾವ್ಯ ಕೃತಿ ಎಂದು ಪ್ರಾ. ಪಿ. ಆರ್ ನಾಗರಹಳ್ಳಿ ಅವರು ಅಭಿಪ್ರಾಯಪಟ್ಟರು. ಅವರು ಇತ್ತೀಚೆಗೆ ಕನ್ನಡ ವಿಭಾಗ ಮುಂಬಯಿ ವಿಶ್ವವಿದ್ಯಾಲಯ ಹಾಗೂ ಮೈಸೂರು ಅಸೋಸಿಯೇಷನ್ ಮುಂಬಯಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಕಾವ್ಯ ಚಿಂತನ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಾಡಿ ಪ್ರಾಚಾರ್ಯ ಡಾ. ಎಸ್.ಕೆ. ಭವಾನಿ ಕೃತಿ '- ಮೇಘ ಪ್ರತಿ ಸಂದೇಶ. ಇದೊಂದು ಅನನ್ಯವಾದ ಕಾವ್ಯ ಕೃತಿ. ಕಾಶ್ಮೀರದಿಂದ ಧನುಷ್ಕೋಟಿಯವರೆಗಿನ ವಿವರವಿಲ್ಲಿದೆ. ಮಂಡಿಕಲ್ ರಾಮ ಶಾಸ್ತ್ರಿಗಳ ಕಾವ್ಯ ಪ್ರತಿಭೆ ಇಲ್ಲಿ ಮಿಂಚಿದೆ ಎಂದವರು ನುಡಿದರು.

ಮುಂಬಯಿ ವಿ.ವಿ. ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ. ಎನ್. ಉಪಾಧ್ಯ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ವಾನ್ ಶಂಕರನಾರಾಯಣ ರಾವ್ ಅವರು ಕೃತಿಯ ನಾಟಕೀಯತೆಯ ಕುರಿತು ಮಾತನಾಡಿದರು. ಪದ್ಮನಾಭ ಶೆಟ್ಟಿ ಅವರು ಸ್ವಾಗತಗೀತೆಯನ್ನು ಹಾಡಿದರು. ಮೈಸೂರು ಅಸೋಸಿಯೇಷನ್‌ನ ಕಾರ್ಯದರ್ಶಿ ಶ್ರೀ ಎಂ.ಎ.ಎನ್. ಪ್ರಸಾದ್ ಅವರು ವಂದಿಸಿದರು.

---

'Suffering ಅಂಬೋದು ಸರ್ವತ್ರ... ಸತ್ಮೇಲೆ ಅವ್ಳಿಂದ ವಿಮೋಚ್ನೆ' ಎನ್ನುತ್ತಿದ್ದ ಕೈಲಾಸಂ ಕೊನೆಗೂ Nov 1946ನಲ್ಲಿ ತಮ್ಮ Sufferings ನಿಂದ ವಿಮೋಚ್ನೆ ಹೊಂದಿದರು.

ನವೋದಯದ ನಾಯಕರಾಗಿ, ನಾಟ್ಯ ಯುಗದ ಆದ್ಯ ಆಚಾರ್ಯರಾಗಿ, ಮಧುರ ಸಂಭಾಷೆಯ ಜನಕರಾಗಿ ಕನ್ನಡ ಜನಕ್ಕೆ 'ನಗೆ ಮೊಗ'ವನ್ನು ನಿರ್ಮಾಮ ಮಾಡಿ ಜನರ ಹೃದಯದ ಸಿಂಹಾಸನದ ಮೇಲೆ ವಿರಾಜಮಾನರಾಗಿರುತ್ತಾರೆ ಕೈಲಾಸಂ. ಅ.ನ.ಕೃ.ರವರ ಹೇಳಿದಂತೆ ಕೈಲಾಸಂರವರ ಒಳಗೆ ಒಂದು ಪ್ರಬಲ ಸಂಸ್ಕೃತಿ ಮನೆ ಮಾಡಿಕೊಂಡಿರದಿದ್ದರೆ ಅವರು ಲಂಡನ್ ಬಿಟ್ಟು ಭಾರತಕ್ಕೆ ಮರಳುತ್ತಿರಲಿಲ್ಲ. ಕನ್ನಡ ಪ್ರಹಸನ ಪ್ರಪಿತಾಮಹರೂ ಆಗುತ್ತಿರಲಿಲ್ಲ.

- ಬಿ. ನಾಗಭೂಷಣ್

---

### ಕಾಲದ ಹಿರಿಮೆ

ನಿಂತಾವ ಬಸ್ಸು ಸಾಲಕ
ಒಂದೊಂದಽ ಬರುತಾವ ಮುಂದಕ
ತುಂಬಿ ತುಂಬಿ ಬರತಾವ
ಹಂಗೆ ತುಂಬಿ ಹೋಗತಾವ
ಮಂದಿ ಬುದು ಬುದು ಇಳಿತಾರ
ಇರವಿ ಹಂಗ ಸಾಲಕ ಹತ್ತತಾರ
ಜನ ಹೋಗತಾರರೆ ಎಲ್ಲೆ ತಿಳಿಯುದಿಲ್ಲ
ನನಗರೆ ಇಷ್ಟ ಊರಿನ ಅರಿವಿರಲಿಲ್ಲ
ಮುಂಜಾನಿಂದ ಸಂಜೀತನಕ ತಿರಗತಾವ
ಜನನ್ನ ಹೊತ್ತು ಹೊತ್ತು ಸಾಗಸತಾವ
ಮಳ್ಯಾಗ ಬೆಂದರೂ ಬ್ಯಾಸರಿಕಿಲ್ಲ.
ಜನರ ಭಾರಕ್ಕ ಬಗ್ಗೊದಿಲ್ಲ
ಖರೆ ಸ್ಥಿತ ಪ್ರಜ್ಞ ಅನ್ನಬೇಕು
ಬಾಳ ಅಂದರ ಹಿಂಗಿರಬೇಕು.
ಇಷ್ಟರೇ ಬಸ್ಸು ತಿರಗತಾವ
ಯಾಕರೆ ನಮ್ಮ ಕಡೆ ಇಲ್ಲ ಆಗ್ಯಾವ?
ಬಸ್ಸಿನ ವ್ಯಾಳ್ಯಾಕ್ಕ ನಾವು ಬರೂದಿಲ್ಲ
ನಮ್ಮ ವ್ಯಾಳ್ಯಾಕ್ಕ ಅವು ಇರೂದಿಲ್ಲ.
ಬಂದದ್ದಕ್ಕಽ ಕಾಯಬೇಕು.
ಬರೂ ವ್ಯಾಳ್ಯಾಕ್ಕ ಹತ್ತಬೇಕು
ಅವಸರ ಮಾಡಿದರ ಲಗೂ ಹುಟ್ಟೂದಿಲ್ಲ
ಅದಽ ಗಳಿಗಿ ಬಂದರ ನಿಂದ್ರೂದಿಲ್ಲ.
ಆಯುಸ್ಸು ಮುಗೀತು ಅಂದರ ಮುಗಿಯೂದಿಲ್ಲ
ಮುಗದಿದ್ದರ ಬ್ಯಾಡಂದರೂ ಬಿಡೂದಿಲ್ಲ.
ಆಗೂದು ವ್ಯಾಳ್ಯಾಕ್ಕಽ ಆಗತದ
ನಡಿಯೂ ಹಂಗಽ ನಡೀತದ
ನಿನ್ನೀದು ಬರೂದಿಲ್ಲ ಇಂದ
ಕಾಲ ಓಡತದ ಮುಂದ

-- ಮೇಧಾ ಎಮ್. ಕುಲಕರ್ಣಿ

# ಶತಾಯುಷಿ ಜಸ್ಟೀಸ್ ನಿಟ್ಟೂರು ಶ್ರೀನಿವಾಸ ರಾವ್ ನಾ ಕಂಡಂತೆ

✍ ಲೀಲಾ ದೋಯಿಸ್

ಚರಿತ್ರೆಯಲ್ಲಿ ಹಲವಾರು ಮಹನೀಯರ ಹೆಸರನ್ನು ನಾವು ಓದುತ್ತೇವೆ. ಹಲವರ ಹೆಸರು ಓದಿ ಮರೆತು ಬಿಡುವುದುಂಟು. ಮತ್ತು ಹಲವರು ಗತಕಾಲದ ನೆನಪಿನಲ್ಲಿ ಅಳಸಿ ಹೋಗಿರುತ್ತಾರೆ. ಆದರೆ ಇಂದಿನ ಆಧುನಿಕ ಮೈಸೂರು ಚರಿತ್ರೆ ಅಂದರೆ (1881-2000) ಚರಿತ್ರೆಯನ್ನು ಬರೆಯಬೇಕಾದರೆ, ಶ್ರೀಮಾನ್ ನಿಟ್ಟೂರು ಶ್ರೀನಿವಾಸ ರಾಯರನ್ನು ಕಾಣದೆ, ಮಾತಾಡದೆ, ಮತ್ತು ಚರ್ಚಿಸದೆ ಬರೆಯಲು ಸಾಧ್ಯವಿಲ್ಲ. ಇದು ನನ್ನ ಅನುಭವಕ್ಕೆ ಬಂದ ಸಂಗತಿ.

ಬೆಂಗಳೂರಿನ ಎನ್.ಆರ್. ಕಾಲೋನಿಯಲ್ಲಿರುವ ಡಿ.ವಿ. ಗುಂಡಪ್ಪನವರ ಅಭಿಮಾನದ ಪ್ರತೀಕವಾದ ಹೆಮ್ಮೆಯ ಗೋಖಲೆ ಸಾರ್ವಜನಿಕ (Gokhale Institute for Pubilc Affairs) ಸಂಸ್ಥೆ ಗ್ರಂಥ ಭಂಡಾರಕ್ಕೆ ಭೇಟಿ ಕೊಟ್ಟು, ಗ್ರಂಥ ಭಂಡಾರಲ್ಲಿ ಕೈಯಾಡಿಸಿ ಅಭ್ಯಾಸ ಮಾಡುವಾಗ ಇಂದಿಗೂ ಅಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಅದರ ಕಾರ್ಯದರ್ಶಿ ನಿಟ್ಟೂರು ಶ್ರೀನಿವಾಸ ರಾಯರನ್ನು ನೋಡಿದಾಗ ಇವರ ಅಪಾರ ಜ್ಞಾನದ ಅರಿವಾಗುವುದು. ನಿಟ್ಟೂರುರವರು ತಮ್ಮ ಜ್ಞಾನ ಭಂಡಾರವನ್ನು ಸದಾ ಎಲ್ಲರೊಡನೆ ಹಂಚಿಕೊಳ್ಳಲು ತಯಾರು.

ನಿಟ್ಟೂರವರನ್ನು ಕಂಡ ಯಾರೆ ಆಗಲಿ, ಅವರ ಮೊದಲನೆ ಅನುಭವ ಅವರ ಸರಳ ಸಜ್ಜನಿಕೆ. ಎಲ್ಲರೊಡನೆ ಅವರ ಸಹಕಾರ ಮತ್ತು ಯಾರೆ ಬಂದು ಕರೆಯಲಿ ಸಾಧ್ಯವಾದೆಡೆಗೆಲ್ಲಾ ಹೋಗಿ ಕಂಡು ಸಾಂತ್ವನದ ಮಾತಾಡಿ ಬರುವುದು ವಾಡಿಕೆ. ಸಾಮಾನ್ಯವಾಗಿ ಗೋಖಲೆ ಸಂಸ್ಥೆಗೆ ಬರುವ ಅಪಾರ ಪತ್ರಿಕೆಗಳನ್ನೆಲ್ಲಾ 'ಇಂದಿನ ಟಪ್ಪಾಲ್ ಬಂತೆ' ಅಂತ ವಿಚಾರಿಸಿ ಓದುವ ಪದ್ಧತಿ ಅವರದು. ಪ್ರಮುಖ ಪತ್ರಿಕೆಗಳ ಸಂಪಾದಕೀಯವನ್ನು ಓದುತ್ತಾ, ಗೋಖಲೆ ಸಂಸ್ಥೆಗೆ ಬರುವ ಹಲವಾರು ಪತ್ರಗಳಿಗೆ ಉತ್ತರಿಸುತ್ತಾ, ಮತ್ತು ಅವರನ್ನು ಅರಿಸಿಕೊಂಡು ಬರುವ ಅಪಾರ ಜನಸಮುದಾಯದ ಜತೆ ಸ್ಪಂದಿಸುತ್ತಾ ಹಲವಾರು ಸಾರ್ವಜನಿಕರಿಗೆ ಸಾಂತ್ವದ ಮಾತಾಡುತ್ತಾ ಪರಿಹಾರ ಮಾರ್ಗ ಹುಡುಕುವುದಕ್ಕೆ ಅವಕಾಶ ಮಾಡಿಕೊಂಡು, ಸುಮಾರು ಮಧ್ಯಾಹ್ನ 1 ಗಂಟೆ ವರೆಗೆ ಇರುವುದನ್ನು, ನಾನು ಗೋಖಲೆ ಸಂಸ್ಥೆಯಲ್ಲಿ ಅಭ್ಯಾಸ ಮಾಡುವಾಗ ನೋಡಿದ್ದೇನೆ. ಹಲವೊಮ್ಮೆ ಯಾವುದೋ ವಿಷಯವನ್ನು ಯೋಚಿಸಿ ಬರೆಯುವಾಗ, ಅವರ ನೆನಪಿನ ಒಂದು ಝಲುಕು ವಿಷಯ ನನ್ನ ಪ್ರಬಂಧವನ್ನು ಮುಗಿಸಲು ಸಹಾಯವಾಗಿದೆ.

ಸುರಾಪಾನದ ಬಗ್ಗೆ ಪ್ರಚಂಡ ಚರ್ಚೆಯಾಗಿದ್ದಾಗ (1920) ಇಂಡಿಯಾ ದೇಶಕ್ಕೆ ಕುಡಿತವನ್ನು ನಿಲ್ಲಿಸಲು ಪ್ರಚಾರಕ್ಕೆಂದು ಜಾನ್‌ಸನ್ ಪುಸ್ಸಿಫುಟ್ (Pussy foot) ಬಗ್ಗೆ ಸುಮಾರು ಜನರಿಗೆ ತಿಳಿದಿರುವುದಿಲ್ಲ. ಇದು ನಡೆದದ್ದು ಸುಮಾರು 1920. ನಿಟ್ಟೂರವರು Johnson Pussyfootರವರು ಸುರಾಪಾನದ ಬಗ್ಗೆ, Fort School ನಲ್ಲಿ ಮಾಡಿದ ಭಾಷಣ ಮತ್ತು ತಾವು ಈ ಭಾಷಣಕ್ಕೆ ಹೋಗಿದ್ದನ್ನು ನನಗೆ ತಿಳಿಸಿಕೊಟ್ಟರು. ಇದರಿಂದ 'ಮಿಕಪಾನ ಚಳುವಳಿ' ಪ್ರಬಂಧದ ಗುಣಮಟ್ಟ ಏರಿತು. ಮೈಸೂರಿನ ಥಿಯಾಸಫಿ ಸಂಘದ ಬಗ್ಗೆ, ಬರೆಯುವಾಗ ಅತ್ಯಮೂಲ್ಯ ಮಾಹಿತಿ ಕೊಟ್ಟರು. ಮತ್ತು ತಾವು ಥಿಯಾಸಫಿಗೆ ಮೆಂಬರ್ ಆಗಿದ್ದನ್ನೂ ತಿಳಿಸಿದರು. ಹೀಗೆ ಎಲ್ಲೂ ದಾಖಿಲಾಗದೆ ಇರುವ ಹಲವಾರು ಮಾಹಿತಿಗಳನ್ನು ನಿಟ್ಟೂರವರು ತಿಳಿಸಿಕೊಟ್ಟಿರುತ್ತಾರೆ.

### ಕಿರು ಪರಿಚಯ

ನಿಟ್ಟೂರು ಶ್ರೀನಿವಾಸ ರಾಯರು ಗಣ್ಯ ಮನೆತನಕ್ಕೆ ಸೇರಿದವರು. ತಂದೆ ಶಾಲಾ ಶಿಕ್ಷಕರು. ಸೋದರ ಮಾವಂದಿರು ಮೈಸೂರಿನಲ್ಲಿ ಉನ್ನತ ಸ್ಥಾನದಲ್ಲಿದ್ದವರು. ಮೈಸೂರು ವಿಶ್ವವಿದ್ಯಾನಿಲ ಯದಲ್ಲಿ ಮತ್ತು ಭಾರತದ ಇತರ ವಿಶ್ವವಿದ್ಯಾನಿಲಯದಲ್ಲಿ ಇಂದಿಗೂ ಕೇಳಿ ಬರುವ ಹೆಸರಾಂತ ತತ್ವ ಶಾಸ್ತ್ರ ಪ್ರೊಫೆಸರ್ ಎಂ. ಹಿರಣ್ಣಯ್ಯ ಅವರ Art Experience ಪುಸ್ತಕ ಪ್ರಪಂಚದ ಎಲ್ಲಾ ಭಾಗದ ಜನರಿಗೂ ಪರಿಚಿತ. ಮೈಸೂರು ಸರಕಾರದ ಕಂಟ್ರೋಲರ್ ಆಗಿ ಫೈನಾನ್ಸ್ ಸೆಕ್ರಟರಿ ಆಗಿ ದಿವಾನ



ಪದವಿಯಲ್ಲಿದ್ದ ಎಮ್.ಎನ್. ಕೃಷ್ಣರಾಯರು ಮತ್ತು ಸರಕಾರ ಸೆಕ್ರಟರಿಯಾಗಿ ನಿವೃತ್ತರಾದ ಎಮ್.ಎನ್. ಸೀತಾರಾಮಯ್ಯನವರು ಇವರ ಸೋದರ ಮಾವಂದಿರು. ಇಂತ ಹಿರಿಯರ ಮೇಲ್ಪಂಕ್ತಿ. ಹೀಗೆ ಒಂದು ವಿದ್ಯೆಯ ಸುಸ್ಕೃತ ಆವರಣ ಮನೆಯಲ್ಲಿತ್ತು.

ಚಳ್ಳಕೆರೆ, ಹೊಸದುರ್ಗ ಸರಕಾರಿ ಶಾಲೆಯಲ್ಲಿ ಸ್ಕೂಲು ಮುಗಿಸಿ, ಶಿವಮೊಗ್ಗೆಯಲ್ಲಿ ಹೈಸ್ಕೂಲು ಸೇರಿದರು. ಹಿಂದೆ B.Sc. ಪದವಿಗೆ ಸೆಂಟ್ರಲ್ ಕಾಲೇಜಿಗೆ ಸೇರಿದರು. ಭೌತ ಶಾಸ್ತ್ರ ಅವರ ಪ್ರಿಯವಾದ ವಿಷಯ. ಮುಂದೆ ಮದ್ರಾಸಿನ ಲಾ ಕಾಲೇಜಿನಲ್ಲಿ ಬಿ.ಎಲ್. ಪದವಿ ಪಡೆದರು. ಮೂರು ದಶಕಗಳ ಕಾಲ ನ್ಯಾಯಾಂಗ ವಾದಿಯಾಗಿ, ಅತ್ಯಂತ ಉನ್ನತ ಹುದ್ದೆಗೆ ಏರಿದರು. ಅಡ್ವೋಕೇಟ್ ಜನರಲ್ ಆಫ್ ಮೈಸೂರು, ಮೈಸೂರು ಹೈಕೋರ್ಟ್ ನ್ಯಾಯಮೂರ್ತಿ, ಮುಖ್ಯ ನ್ಯಾಯಮೂರ್ತಿ, ಹಂಗಾಮಿ ರಾಜ್ಯಪಾಲ, ಮತ್ತು ಭಾರತ ಸರಕಾರದ Vigilance Commssioner ಇವರು ಅಲಂಕರಿಸಿದ ಹುದ್ದೆಗಳು. ಅನೇಕ ನ್ಯಾಯವಾದಿ ಸಮ್ಮೇಳನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಗಹನ ವಿಚಾರಗಳತ್ತ ಗಮನ ಹರಿಸಿ, ರಾಜಕೀಯ ವಿಚಾರ ವೇದಿಕೆಗಳಲ್ಲಿ ಗಣ್ಯವಾದ ಕೆಲಸವನ್ನು ಮಾಡಿದ್ದಾರೆ.

ನಿಟ್ಟೂರವರ ಕಾಂಗ್ರೆಸ್ ಅಭಿಮಾನ ಎಲ್ಲರಿಗೂ ತಿಳಿದ ವಿಷಯ. ಇಂದಿಗೂ ಅವರು ಒಂದು ಶುಭ್ರವಾದ ಖಾದಿ ಜುಬ್ಬ ಮತ್ತು ಖಾದಿ ಶಲ್ಯ, ಗೋಖಲೆ ಸಂಸ್ಥೆಯಲ್ಲಿ ರೆಡಿಯಾಗಿ, ಎಲ್ಲಾದರೂ ತುರ್ತು ಹೋಗಬೇಕಾದರೆ ಧರಿಸುವುದಕ್ಕೆ ಇರಲೆಂದು ಇಟ್ಟಿರುವುದನ್ನು ನಾನು ನೋಡಿದ್ದೇನೆ. ಕಾಂಗ್ರೆಸ್ ಚಳುವಳಿಯ ಕಾಲದಲ್ಲಿ ಅವರು ಸಕ್ರಿಯವಾಗಿ ದುಡಿದಿದ್ದೇ ಅಲ್ಲದೆ ಅವರ ಸುತ್ತ ಒಂದು ಕಾರ್ಯಕರ್ತರ ಗುಂಪು ಸುತ್ತುವರಿ ಕೆಲಸ ಮಾಡುತ್ತಿತೆಂದು ತಿಳಿಸಿಕೊಟ್ಟಿದ್ದಾರೆ. ಹಲವಾರು ವಾಣಿಜ್ಯೋದ್ಯಮಿಗಳು ಅವರು ಸ್ನೇಹಿತರು. ಗಾಂಧಿಜೀಯವರು (1927) ಬೆಂಗಳೂರಿಗೆ ಭೇಟಿ ಕೊಟ್ಟಾಗ ನಿಟ್ಟೂರ್‌ರವರು ಅವರಿಗೆ ಪರಿಚಿತರಾದರು. ಗಾಂಧಿ ಸ್ಮಾರಕ ನಿಧಿ, ಗಾಂಧಿ ಶಾಂತಿ ಪ್ರತಿಷ್ಠಾನಗಳ ಅಧ್ಯಕ್ಷರಾಗಿ ಅವರ ಸೇವೆ ಸಂದಿದೆ. ನಿಟ್ಟೂರವರೇನಾದರೂ ತಮ್ಮ ಲೇಖನಿಯನ್ನು ತಮ್ಮ ನೆನಪಿನ ಲೋಕಕ್ಕೆ ಉಪಯೋಗಿಸಿದ್ದರೆ, ಮಾನ್ಯ ಡಿ.ವಿ. ಗುಂಡಪ್ಪನವರಂತೆ ಇನ್ನೂ ಒಂಬತ್ತು ಸಂಪುಟ 'ಜ್ಞಾಪಕ ಚಿತ್ರಗಳು' ತಯಾರಾಗಬಹುದಾಗಿತ್ತು. ಮತ್ತು ಇತಿಹಾಸದ ವಿದ್ಯಾರ್ಥಿಗೆ ಇದು ಅತ್ಯಮೂಲ್ಯ ಆಕರವಾಗಬಹುದಿತ್ತು. ಆದರೆ ಯಾಕೊ ಅವರ ಮನಸ್ಸು ಇದಕ್ಕೆ ಮಣಿಯಲಿಲ್ಲ.

ನಿಟ್ಟೂರವರದ್ದು ಸ್ವಂತ ಬರವಣಿಗೆ ಹೆಚ್ಚಿಲ್ಲವಾದರೂ ಅವರೂ ಮತ್ತು ಸಹಧರ್ಮಿಣಿ ಪದ್ಮಮ್ಮನವರು ಕನ್ನಡಿಸಿದ, ಗಾಂಧೀಜೀಯವರ ಆತ್ಮಕಥೆ, ಭಗವದ್ಗೀತೆಯ ಟೀಕೆ ಮುಖ್ಯವಾಗಿವೆ. ಕನ್ನಡಿಗರೆಲ್ಲಾ ಈ ಪುಸ್ತಕಗಳನ್ನು ಓದಿ ಸಂತೋಷಿಸಿದ್ದಾರೆ. ಅದಲ್ಲದೆ ಹಲವಾರು, ಹಿರಿಯರ ಕಿರಿಯರ ಪುಸ್ತಕಗಳಿಗೆ ಮುನ್ನುಡಿ ಬರೆಯುವುದೇ ಅಲ್ಲದೆ, ಪುಸ್ತಕ ಪ್ರಕಟಣೆಯಲ್ಲಿ ನೆರವು ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ಕರ್ನಾಟಕ ಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ಇವರ ನಿರಂತರ ಶ್ರಮವಿದೆ. ಸಾಹಿತ್ಯ ಪರಿಷತ್ತಿನ ಸಮ್ಮೇಳನಗಳ ಇತಿಹಾಸವನ್ನು ಅವರು ವಿವರವಾಗಿ ವಿವರಿಸಬಲ್ಲರು. ಸಾಹಿತ್ಯ ಪರಿಷತ್ತಿನ ಪ್ರಚಾರ ಕಾರ್ಯದಲ್ಲಿ ಮುಂದಾಳತ್ವ ಹೊಂದಿದ್ದರು. ಅವರೇ ಹುಟ್ಟು ಹಾಕಿ ಬೆಳೆಸಿದ ಪ್ರಕಾಶನ ಸಂಸ್ಥೆ 'ಸತ್ಯ ಶೋಧನ ಪುಸ್ತಕ ಭಂಡಾರ', ಸುಮಾರು 20-30 ವರುಷ ನಡೆಸಿರುವರು. ಸತ್ಯ ಶೋಧನ ಪುಸ್ತಕ ಭಂಡಾರ ಹಲವಾರು ಉತ್ತಮ ಪುಸ್ತಕಗಳನ್ನು ಹೊರ ತಂದಿದೆ. ಹಲವಾರು ಸಂಘ, ಸಂಸ್ಥೆಗಳಿಗೆ ಮಾರ್ಗದರ್ಶನ ಮಾಡುತ್ತಿರುವ ನಿಟ್ಟೂರವರಿಗೆ ಅರಬಿಂದು ಸೊಸೈಟಿಯ ಮುಖ್ಯಸ್ಥರು. 1926ರಲ್ಲಿ ಹಿಂದೀ ಪ್ರಚಾರ ಸಭೆ ಗೌರವ ಡಾಕ್ಟರೇಟ್ ಕೊಟ್ಟು, ಗೌರವಿಸಿದೆ. 1997 ಕರ್ನಾಟಕ ಸರಕಾರದ ರಾಜ್ಯೋತ್ಸವದ ಪ್ರಶಸ್ತಿ ಸಂದಿದೆ.

ಆಗಸ್ಟ್ 24, 2002 ಮಾನ್ಯ ನಿಟ್ಟೂರು ಶ್ರೀನಿವಾಸರಾಯರಿಗೆ 99 ತುಂಬಿದೆ. ಹೋದ ತಿಂಗಳು ಬೆಂಗಳೂರಿಗೆ ಹೋಗಿದ್ದಾಗ, ಇಡೀ ಕರ್ನಾಟಕದಲ್ಲಿ ಅವರಿಗೆ ಸತ್ಕಾರ, ಸಮಾರಂಭಗಳು ನಡೆದಿದು, ಅತ್ಯಂತ ಗಡಿಬಿಡಿಯಲ್ಲಿದ್ದರೂ ನಾನು ತಮ್ಮನ್ನು ಕಾಣಲು ಬರಲೇ ಎಂದಾಗ, ತಕ್ಷಣ, ಬಾ ನನಗೆ ತುಂಬಾ ಸಂತೋಷ ಎಂದು ನನ್ನನ್ನು ಪ್ರೀತಿಯಿಂದ ಬರಮಾಡಿಕೊಂಡು ಬಹಳ ಹೊತ್ತು ಕೂರಿಸಿಕೊಂಡು ಮಾತಾಡಿ ಅನೇಕ ವಿಚಾರಗಳನ್ನು ತಿಳಿಸಿಕೊಟ್ಟರು. ಅದಲ್ಲದೆ ಮತ್ತೊಮ್ಮೆ ಬರಲು ಆಹ್ವಾನವಿತ್ತರು. ಇಂತಹ, ಸರಳ, ಸಜ್ಜನ, ಹಿರಿಯರ ಮಾರ್ಗದರ್ಶನ ನಮ್ಮೊಡನೆ ಸದಾ ಇರಲಿ ಅಂತ ಭಗವಂತನನ್ನೂ ಪ್ರಾರ್ಥಿಸುವ, ಅಸೋಸಿಯೇಶನ್ ಪರವಾಗಿ ನೇಸರು ಮೂಲಕ ಜಸ್ಟೀಸ್ ನಿಟ್ಟೂರು ಶ್ರೀನಿವಾಸರಾಯರಿಗೆ ಹಾರ್ದಿಕ ಅಭಿನಂದನೆಗಳು.

# BIRTH CENTENARY OF SHRI H.V.R.IENGAR CELEBRATED AT BANGALORE

- by T.S Champaknath

The twentieth century was a landmark period in Indian History, bringing about the transition from the British Rule to an Independent India. Many luminaries from different walks of life have contributed their mite to this transformation. Amongst the administrators were some reputed officers of the Indian Civil Service, whose careers overlapped the pre-independence and post-independence periods and as such had to delicately balance their functions to the satisfaction of the erstwhile British rulers and the subsequent leaders of modern India. Shri H.V.R.Iengar (1902-1978) was one such distinguished personality, bridging the pre-1947 and post-1947 periods.

Haravu Varadaraja Iengar, affectionately known as 'HVR', was born in Holenarasipur of the present Karnataka State (then known as the Mysore State), on 27th August 1902, as the third child amongst eight in a brahmin family of modest means. After a noteworthy studentdays and an award of a gold medal in science, in his final year at Central College Bangalore, HVR took up Lecturership at the Royal Institute of Science, Bombay. In 1924, he passed the Indian Civil Service examination with top honours. This was followed by two years stay at Oxford, after which his career started in the Old Bombay Presidency. HVR had to wear several hats during his long career. With his unassuming nature and consummate skill, he was able to delicately handle the various national leaders of diverse opinions he served under, to the satisfaction of all.

HVR who was fond of children, was born on Gokulashtami Day. HVR's birth centenary was celebrated at Bangalore in August this year, by holding competitions for children and also a public function. A painting competition for children of 6-12 years was arranged. About 150 children from eight schools in the neighbourhood were invited. Internationally renowned artist & painter Shri S.G.Vasudev was the chief guest. The children were given the subject or theme of earth, tree, and sky for on the spot painting contest. Camlin Limited provided the materials for painting. The children did well and showed a lot of talent potential.

The theme for dance, ballet, folksongs and kolata was Krishna. Children of the same age group of 6-12 years from eight schools participated and presented the various dance items very well. Smt. Vimala Rangachar, the well-known social worker, was the chief guest. Each child participant was given a special gift along with snacks. A large gathering of audience appreciated the event.

A get-together & lunch was held on Monday, 26th August and was unique as the close relatives of HVR who were present narrated incidents of their interaction with late H.V.R. On the 27th August, the birth centenary day, a public meeting was held at Bharatiya Vidya Bhavan's premises. The function was well attended by relatives and friends. Centenarian ex-Chief Justice Shri Nittoor Srinivasa Rao, who was closely associated with HVR and his family, presided over the function. Dr.Raja Ramanna, ex-chairman, Atomic Energy Commission, delivered the birth centenary speech.

In the 60s and early 70s, HVR had written in Indian Express, articles on a wide range of topics covering the British rule, historic mid-night scene on the eve of Independence, Nehru-Patel diversity, attitude of British, American and Soviet governments towards India and Pakistan, Kashmir, constitution, government bureaucracy, law and order, banking, Indian economy, etc. These portray a true picture of Indian History. Many of his perceptions reflected in these writings hold true even in the present day situation. A compilation of some of these writings of HVR has been brought out as a book titled "SNAPSHOTS OF HISTORY", by Indira & Bipin Patel and is published by Ananya Publications – Asian Court, 13 Nepean Sea Road, Mumbai 400 036 (email: bpp3@vsnl.com). This book was released by Shri Nittoor Srinivasa Rao during the function.

●

**IMPORTANT MILESTONES IN HVR'S CAREER:**

- **1928 Assistant Collector, Ahmedabad**
- **1929 Assistant Collector, Panch Mahals district (During this period he is credited for his administrative skills in the handling of the Hindu-Muslim tensions in Godhra, the district headquarters where Morarji Desai was the Deputy Collector).**
- **1930 Sub-Divisional Officer in the District of Broach (Period of the famous Salt Satyagraha led by Gandhiji)**
- **1937 Finance Secretary, Bombay Government**
- **1942 Home Secretary, Bombay Government (During this year he was awarded the C.I.E. medal. The Quit India movement in 1942 and the subsequent period brought him in contact as Home Secretary, with several national leaders amongst whom the prominent were Mahatma Gandhi, Jawaharlal Nehru and Sardar Patel)**
- **1944-1946 Secretary, Department of Planning and Development, Government of India**
- **1947 Secretary of the Constituent Assembly and Principal Private Secretary to the Prime Minister, Jaw**
- **1948 Secretary to the Home Ministry under Deputy Prime Minister Sardar Patel**
- **1952 Secretary, Ministry of Commerce and Industry**
- **1956 Chairman, State Bank of India**
- **1957-62 Governor, Reserve Bank of India (In 1962 he was awarded the Padma Vibushan for his outstanding contribution to public service)**
- **1962 onwards, After retiring from Government Service in 1962, HVR was associated with corporate India as Chairman of several enterprises and Board of several well-known industrial groups.**

ಕಾಡುಗುಡ್ಡಗಳಲ್ಲಿ ತನ್ನ ಗರಿಗಳಿಂದಲೇ ಕುಣಿಯುವ ನವಿಲಿನ ನರ್ತನ' ಎಂಬಲ್ಲಿ ಕಾರಂತರು ಪರರ ಅನುಕರಣೆಯನ್ನು ಖಂಡಿಸಿದ್ದಾರೆ. ನಾವು, ನಮ್ಮ ಯುವಕರು ವಿಚಾರ ಶೂನ್ಯ ಪರಾನುಕರಣೆಯ ಹಾದಿ ಹಿಡಿಯಬಾರದೆಂಬ ಕಳಕಳಿ, ಕಾಳಜಿ ಕಾರಂತರಿಗಿತ್ತು. ಜೀವನಕ್ಕೊಂದು ಗುರಿಯಿರಲಿ ಎಂಬ ಕಿವಿಮಾತನ್ನು ಹೇಳಿದ್ದಾರೆ. 'ಕಾರಂತರ ವಿಚಾರ ಸರಣಿ ಬರೇ ಸರಳ ಅರ್ಥ ವಿವರಣೆಗಳಲ್ಲಿಯೇ ಮುಗಿಯದೆ, ಹಲವು ದೃಷ್ಟಿ ಕೋನಗಳಿಂದ ಪರಿಶೀಲಿಸಿ, ವಿಶ್ಲೇಷಿಸಿ, ವಿಷಯಗಳ ಬೇರು ಬುಡಗಳನ್ನೆಲ್ಲ ಅಗೆದು ತೋರಿಸಿ ನಮ್ಮಲ್ಲಿ ವಿಸ್ಮಯ ಹುಟ್ಟಿಸುತ್ತಾರೆ. ನಮ್ಮಲ್ಲಿ ಚಿಂತನಾಪರತೆಯನ್ನು ಪ್ರೇರಿಸುತ್ತಾರೆ. ನಮ್ಮನ್ನು ಜ್ಞಾನ ಕುತೂಹಲಿಗಳನ್ನಾಗಿ ಮಾಡುತ್ತಾರೆ. ಪ್ರಾಯಶಃ ಜಗತ್ತಿನ ಯಾವ ಸಾಹಿತಿಯೂ ಕಾರಂತರು ಯೋಚಿಸಿದಷ್ಟು ಯೋಚಿಸಲಾರರು ಎಂಬ ಮಾಲಿನಿ ಮಲ್ಯ ಅವರ ಮಾತಿನಲ್ಲಿ ಉತ್ಪ್ರೇಕ್ಷೆಯಿಲ್ಲ. (ಶಿವರಾಮ ಕಾರಂತರ ಲೇಖನಗಳು, ಸಂಪುಟ 5 ಸಂಪಾದಕೀಯ ಸಮೀಕ್ಷೆ ಪುಟ 10). 'ನಾವು ಅನ್ನುವ ಉಪದೇಶಕ್ಕೂ ನಮ್ಮದೇ ಜೀವನಕ್ಕೂ ಯಾವ ಸಂಬಂಧವೂ ಇಲ್ಲದೆ ಹೋದರೆ, ಆಗ ನಮ್ಮ ಮಾತಿಗೆ ಬೆಲೆ ಬರಲಾರದು' ಎಂಬ ಮಾತು ಕಾರಂತರ ಬದುಕಿಗೂ ಚೆನ್ನಾಗಿ ಅನ್ವಯಿಸುತ್ತದೆ. ಅವರ ನುಡಿ-ನಡೆಯ ನಡುವೆ ಅವಿನಾಭಾವ ಸಂಬಂಧವಿತ್ತು, ಅವರದು ನೇರ ನಿಷ್ಠುರ ವ್ಯಕ್ತಿತ್ವ. ಕಂಡದ್ದನ್ನು ಕಂಡ ಹಾಗೆ ಮುಲಾಜಿಲ್ಲದೆ ಹೇಳುತ್ತಾ ಬಂದವರು. ನಮ್ಮ ರಾಷ್ಟ್ರದ ಆಡಳಿತ ಸೂತ್ರ ಹಿಡಿದವರನ್ನೂ ಅವರು ಅನೇಕ ಬಾರಿ ಟೀಕಿಸಿದ್ದುಂಟು. ಎದುರು ಹಾಕಿಕೊಂಡಿದ್ದುಂಟು. ಎರಡನೆಯ ಮಹಾಯುದ್ಧದಿಂದ ತೊಂದರೆಗೊಳಗಾದ ರಾಷ್ಟ್ರಗಳು ಅಲ್ಪಕಾಲದಲ್ಲೇ ಸಾಧಿಸಿದ ಅದ್ಭುತ ಪ್ರಗತಿಯನ್ನು ಕಂಡು ನಮ್ಮಲ್ಲೂ ಹಾಗಾಗಬೇಕೆಂದು ಬಯಸಿದವರು. ನಮಗೆ ನಮ್ಮ ಮೂಲಭೂತ ಅವಶ್ಯಕತೆಗಳನ್ನು, ಸ್ವಾವಲಂಬನೆಯನ್ನು ಸಾಧಿಸಲು ಸಾಧ್ಯವಾಗಿಲ್ಲ ಎಂಬ ಬಗೆಗೆ ಅವರು ಸಾಕಷ್ಟು ಚಿಂತಿಸಿದ್ದಾರೆ. ಇದಕ್ಕೆ ಕಾರಣಗಳನ್ನು ತಿಳಿಸಿಕೊಟ್ಟಿದ್ದಾರೆ. ಈ ದೇಶದಲ್ಲಿ ಸ್ವಾತಂತ್ರ್ಯದ ಬಳಿಕ ಏನು ಪ್ರಗತಿಯಾಗಿಲ್ಲ ಎಂದು ಕಾರಂತರು ಹೇಳಿಲ್ಲ. ಸಾಕಷ್ಟು ಹೊಸ ಉದ್ಯಮಗಳು ಹುಟ್ಟಿವೆ. ಆದರೆ ಉಣ್ಣುವ ಬಾಯಿಗಳು ಹೆಚ್ಚಿವೆ. ತೋರಿಕೆಯ ಪ್ರಗತಿಗಿಂತ ವಾಸ್ತವಿಕ ಬಡತನ ಹೆಚ್ಚಿದೆ. ಬಡವ-ಶ್ರೀಮಂತರ ನಡುವೆ ಅಂತರ ವಿಪರೀತಕ್ಕೆ ಚಾಚಿದೆ. ಬಡತನವನ್ನು ಗೆಲ್ಲುವುದಕ್ಕೆ ನಮಗೆ ಸಾಧ್ಯವಾಗುತ್ತಿಲ್ಲ ಎಂಬ ಅರಿವು ಅವರಿಗಿದೆ. ವಾಸ್ತವವನ್ನು ಹೀಗೆ ಅವರು ತೆರೆದಿಟ್ಟಿದ್ದಾರೆ. 'ನಿನ್ನೆ ಮೊನ್ನೆಯ ತನಕ ಒಬ್ಬ ಬಡ ಉಪಾಧ್ಯಾಯನೋ ಗುಮಾಸ್ತನೋ ತಾನು ನಿವೃತ್ತನಾಗುವ ಹೊತ್ತಿನಲ್ಲಿ ಸ್ವಂತ ಗುಡಿಸಲನ್ನು ಕಟ್ಟಿಕೊಂಡು ಅಲ್ಲಿರಬಹುದೆಂಬ ಕನಸನ್ನು ಸಾಧ್ಯವಾಗಿಸಬಹುದಿತ್ತು. ಇಂದು, ಅವನಿಗಿಂತ ಹೆಚ್ಚು ಗಳಿಕೆಯುಳ್ಳ ವ್ಯಕ್ತಿಗಳ ಪಾಲಿಗೂ ಅಂಥ ಸ್ವಗೃಹದ ಕನಸು ಬಲು ದೂರ ಉಳಿದಿದೆ. ಅಷ್ಟೇ ಅಲ್ಲ, ಕಳ್ಳ ಸಂಪಾದನೆಯ ದಾರಿಗಳನ್ನು ಕಲಿಯದವರಿಗೆ, ಅದು ಅಸಾಧ್ಯದ ಹಂಬಲವಾಗಿದೆ'. (ಶಿವರಾಮ ಕಾರಂತರ, ಲೇಖನಗಳು ಸಂಪುಟ 5 ಪುಟ 57-58) ನಮ್ಮ ರೂಪಾಯಿ ಮೌಲ್ಯ ಕುಸಿದಿರುವುದಕ್ಕೆ ಕಾರಂತರು ತೀವ್ರ ಚಿಂತನೆ ವ್ಯಕ್ತಪಡಿಸಿದ್ದಾರೆ. 'ನಮ್ಮ ದೇಶದಲ್ಲಿ ಕಂಡು ಬರುತ್ತಿರುವ ಅದ್ಭುತ ಪ್ರಗತಿ ಕಳ್ಳ ಸಂಪಾದನೆಗೇನೇ ಸಲ್ಲಬೇಕು' ಎಂದು ನೊಂದು ಅವರು ನುಡಿದಿದ್ದಾರೆ. 'ಕಳ್ಳ ಸಂಪಾದನೆಯೊಂದೇ ನಮ್ಮ ನಾಳೆಗೆ ಭರವಸೆ ಕೊಡ ತೊಡಗಿದ ಉಪವೃತ್ತಿ ಹೊರತು ಪ್ರಾಮಾಣಿಕವಾದ ದುಡಿಮೆಯಲ್ಲ'' ಯುರೋಪಿನಲ್ಲಿ ತಾನು ಕಂಡ ಪ್ರಗತಿ ಆ ಜನರ ದುಡಿಮೆಯ ಫಲ. ಅವರು ಸಾಲ ಪಡೆದ ಹಣದಿಂದ ಉದ್ಯಮಗಳನ್ನು ತಿರುಗಿ ಸೃಷ್ಟಿ ಮಾಡಿ, ದುಡಿದರು; ಲಾಭ ಗಳಿಸಿದರು. ಉದ್ಯಮಗಳನ್ನು ಬೆಳೆಸಿದರು. ಕೊಂಡ ಸಾಲವನ್ನು ಹಿಂದಿರುಗಿ ಕೊಟ್ಟರು. ಥೈವಾನ್ ದೇಶ ಹತ್ತೇ ಹತ್ತು ವರ್ಷಗಳಲ್ಲಿ ಸಾಲವನ್ನು ಮರು ಪಾವತಿ ಮಾಡಿತು. ತನ್ನ ದುಡಿಮೆಯಿಂದ ನಾಡಿನ ಪ್ರಗತಿಯನ್ನು ಅಷ್ಟೊಂದು ತೀವ್ರವೂ ಅದ್ಭುತವೂ ಆಗಿ ಸಾಧಿಸಿತು. ನಮ್ಮ ನಾಡಿನಲ್ಲಿ ಕಾಣುತ್ತಿರುವ ಸಾಂಪತ್ತಿಕ ಅಭಿವೃದ್ಧಿ ಭ್ರಷ್ಟಾಚಾರ, ಕಳ್ಳತನ, ಕಳ್ಳ ಸಾಗಣೆ ಸಾರ್ವಜನಿಕ ವಂಚನೆ ಮೊದಲಾದವುಗಳಿಂದ ಮರೆಯುವಂಥ ಪ್ರಗತಿಯಾಗಿದೆ. ಸ್ವಂತಕ್ಕೆ ಒಂದೇ ಒಂದು ಕಾಸು ಬಂಡವಾಳವನ್ನು ತೊಡಗಿಸದ ಜನಗಳು ಒಂದೇ ಒಂದು ದಶಕದೊಳಗೆ ಈ ನಾಡಿನಲ್ಲಿ ಕುಬೇರ ಪುತ್ರರಾಗುತ್ತಾರೆ!' (ಅದೇ ಪುಟ 58) ಹೀಗಿರುವಾಗ ದೇಶದ ಪ್ರಗತಿ ಎಂತು ಸಾಧ್ಯ ಎಂದು ಅವರು ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ. ಇದಕ್ಕೆಲ್ಲ ಕಾರಣ ನಾವೇ. ನಮ್ಮ ವ್ಯಕ್ತಿತ್ವ ಸರಿಯಾದಲ್ಲಿ ಮಾತ್ರ ಇದಕ್ಕೆಲ್ಲ ಪರಿಹಾರ ಸಿಗುತ್ತದೆ. ಈ ನಿಟ್ಟಿನಲ್ಲಿ ಮನ ಮನಗಳಲ್ಲಿ ಮನೆ ಮನೆಗಳಲ್ಲಿ ವೈಚಾರಿಕ ಕ್ರಾಂತಿಯ ಅಗತ್ಯವನ್ನು ಅವರು ಪ್ರತಿಪಾದಿಸಿದರು. ತಮ್ಮ ಬರವಣಿಗೆಯ ಮೂಲಕ ಸಾರ್ವಜನಿಕರ ಬದುಕನ್ನು ಮೇಲೆತ್ತಲು ಪ್ರಾಂಜಲ ಮನಸ್ಸಿನಿಂದ ದುಡಿದರು. ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದರು. ಬರವಣಿಗೆಯ ಮೂಲಕ ಅರಿವನ್ನು ಮೂಡಿಸಲು ಮುಂದಾದರು. 'ಅರಿವುಳ್ಳವನ ಮನಸ್ಸು, ಇಂದ್ರಿಯಗಳು ಪ್ರತಿಯೊಂದನ್ನೂ ಏನು? ಏಕೆ? ಹೇಗೆ? ಎಂದು ಕೇಳಿ ತಿಳಿಯುತ್ತದೆ. ತಿಳಿದು, ಬದುಕನ್ನು ಸರಿಪಡಿಸಿಕೊಳ್ಳುತ್ತದೆ' ಎಂದವರು ಬಲವಾಗಿ ನಂಬಿದ್ದರು. ಬೆಳವಣಿಗೆಯ ವಿದ್ಯಮಾನ ಯಾವತ್ತೂ ಜನ ಸಮೂಹದಲ್ಲಿ ಕಾಣಿಸಿದಾಗ ಮಾತ್ರವೇ ಮಹತ್ಕಾರ್ಯ ಸಾಧನೆಯಾಗುತ್ತದೆ. ಬದುಕು ಚಟುವಟಿಕೆಯುಕ್ತವಾಗಿರಬೇಕು. ಎಷ್ಟು ದಿನ ಬದುಕಿದೆವು ಎಂಬುದು ಮಹತ್ವದ್ದಲ್ಲ. ಹೇಗೆ ಬದುಕಿದೆವು? ಎಂಬುದು ಮುಖ್ಯ. ಅಲ್ಲಿ ಸುತ್ತಲಿನವರಿಗೆ, ಸಮಾಜಕ್ಕೆ ಹಿತಕರವಾಗಬೇಕು. ಅದುವೇ ನಿಜವಾದ ಬದುಕು ಎಂಬುದನ್ನು ಎತ್ತಿ ಹೇಳಿ ಕ್ರಿಯಾಶೀಲವಾಗಿ ಹಾಗೆ ಬದುಕಿ ತೋರಿಸಿದರು. ಕಾರಂತರ ಬದುಕು ಈ ದೃಷ್ಟಿಯಿಂದ ನಮಗೆ ಅನುಕರಣೀಯ. 'ಎಲ್ಲರ ಬದುಕೂ ಬೆಳೆದು ದೊಡ್ಡದಾಗಲಿ' ಎಂದು ಅವರು ಹಾರೈಸಿದವರು. ಮನುಷ್ಯ ಮನುಷ್ಯನಾಗಿ ಉಳಿಯಬೇಕೆಂಬುದು ಕಾರಂತರ ನಿರಂತರವಾದ ಕಾಳಜಿಯಾಗಿತ್ತು. ತಮ್ಮ ಲೇಖನಿಯ ಮೂಲಕ ಅದಕ್ಕೆ ಅವರು ನಿರಂತರವಾಗಿ ನೀರೆರೆದರು. ಹೀಗಾಗಿ ಕಾರಂತರು ಒಬ್ಬ ಮಹಾ ಮಾನವತಾವಾದಿಯೂ ಹೌದು. ಆದರ್ಶ ಬೇರೆ; ಜೀವನ ಬೇರೆ. ಜೀವನಕ್ಕೆ ಒಗ್ಗದ ಒಣ ಆದರ್ಶಗಳನ್ನು ಕಾರಂತರು ಎಂದೂ ಪುರಸ್ಕರಿಸಿದವರಲ್ಲ. ಕಾರಂತರು ಬರೇ ಕಲೆಯ ಆರಾಧಕರಲ್ಲ. ಸಾಹಿತ್ಯ, ಅವರ ಅನುಭವ ದ್ರವ್ಯ. ಅದು ಗಟ್ಟಿಯಾದ ವೈಚಾರಿಕ ನೆಲಗಟ್ಟಿನ ಮೇಲೆ ನಿಂತಿದೆ.

'ಶಾಸ್ತ್ರೀಯ ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ತಜ್ಞ ವಿಶೇಷಜ್ಞರು ದಿಗ್ಗಜಗಳಂತೆ ಸಾರ್ವಜನಿಕ ಸಮಸ್ಯೆಗಳತ್ತ ದಿವ್ಯ ನಿರ್ಲಕ್ಷ್ಯದಿಂದ ತಮ್ಮ ತಮ್ಮ ದಂತದ ಗೋಪುರಗಳಲ್ಲಿ ದೂರ ನಿಂತಾಗ ಅವರ ಭಂಡಾರದ ಬೀಗ ಮುದ್ರೆಯನ್ನೊಡೆದು, ಅಲ್ಲಿಯ ತತ್ವ, ಪಥ್ಯಗಳ ನಿಧಿಯನ್ನು ಬಾಳಿನ ಇಂದು ನಾಳೆಗಳ ಪೇಟೆಯ ನಾಣ್ಯವಾಗಿ ಮುದ್ರಿಸಿ ಜನವನ್ನು ಬದುಕಿಸಲಿಕ್ಕೆ ಅದನ್ನು ಬಳಸಲು ಮುಂದೆ ಬಂದ ಚಿನಿವಾಲನೇ ವೈಚಾರಿಕ ಸಾಹಿತಿಯು (ಸಂಪುಟ 5 ಪುಟ 12) ಎಂಬ ಡಾ. ಗೌರೀಶ ಕಾಯ್ಕಿಣಿ ಅವರ ಮಾತು ಕಾರಂತರಿಗೆ ಚೆನ್ನಾಗಿ ಅನ್ವಯವಾಗುತ್ತದೆ. ಒಟ್ಟಿನಲ್ಲಿ ಸಮ ಸಮಾಜದ ಸೃಷ್ಟಿಗಾಗಿ ನ್ಯಾಯ ನೀತಿ ಪ್ರೀತಿಗಾಗಿ ನಿರಂತರವಾಗಿ ಚಿಂತಿಸಿದ ಶಿವರಾಮ ಕಾರಂತರು, ಕನ್ನಡ ನಾಡಿನಲ್ಲಿ ವಿಚಾರ ಕ್ರಾಂತಿಯನ್ನು ಬಿತ್ತಿದ ಧೀಮಂತ ಲೇಖಕ.

**ಆಕರ ಗ್ರಂಥಗಳು:-**


1. ಶಿವರಾಮ ಕಾರಂತ; ಹುಚ್ಚು ಮನಸ್ಸಿನ ಹತ್ತು ಮುಖಗಳು, ಅಕ್ಷರ ಪ್ರಕಾಶ, ಸಾಗರ: 1984
2. ಶಿವರಾಮ ಕಾರಂತರ ಲೇಖನಗಳು ಸಂಪುಟ 5 (ಸಂ) ಬಿ. ಮಾಲಿನಿ ಮಲ್ಯ; ಪ್ರಸಾರಾಂಗ, ಮಂಗಳೂರು ವಿಶ್ವ ವಿದ್ಯಾಲಯ. 1994
3. ಕಾರಂತ ಮಂಥನ: ಟಿ.ಪಿ. ಅಶೋಕ (ಸಂ) ಪುತ್ತೂರು ಕರ್ನಾಟಕ ಸಂಘ, 1994
4. ಗೌರೀಶ ಕಾಯ್ಕಿಣಿ ಅವರ ಸಮಗ್ರ ಸಾಹಿತ್ಯ ಸಂಪುಟ 3 & 5
5. ಶಿವರಾಮ ಕಾರಂತರ ವಿವಿಧ ಕಾದಂಬರಿಗಳು.
6. ಕಾರಂತ ಪ್ರಪಂಚ ಕಾರಂತ: ಅಭಿನಂದನ ಗ್ರಂಥ.


(ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನ ಆಯೋಜಿಸಿದ್ದ ಕಾರಂತ ಉತ್ಸವದ ಕಾರ್ಯಕ್ರಮದಲ್ಲಿ ನೀಡಿದ ಉಪನ್ಯಾಸದ ಲೇಖನ ರೂಪವಿದು.)


-ಡಾ. ಜಿ.ಎನ್. ಉಪಾಧ್ಯ
ಮುಂಬಯಿ ವಿಶ್ವವಿದ್ಯಾಲಯ
ವಿದ್ಯಾನಗರಿ, ಮುಂಬಯಿ.

## CONCERTS ON THE FIRST FRIDAY OF EVERY MONTH



*Smt. Meenaxi Biswas at the concert.*

For quite some time now the Mysore Association and the Indian Musicological society have been jointly organizing music concerts at the Association. It was our desire to hold these concerts on a fixed day of the month so that the music lovers would know that on that day there would be a concert at the association. We have been able to do this now, and since the last 3-4. months the concert is being held, at 7.00 p.m. on the first Friday of the month. We shall continue to present these concerts on the first day of each month. We have presented in these concerts very talented and eminent musicians. It shall be our endeavour to present you concerts of high calibre from talented artists.

Therefore kindly mark out the first Friday of the month in your calender and do make it a point to attend these concerts. Please also invite your music lover friends to attend these concerts, as it is open to all music lovers.



*Pandit Vinayak Chittar playing the Sitar*

### MATRIMONIAL

Wanted working girl with good family background for 29 years old, Chavanasa Gotra, Kritika Nakshtra boy B.Com., L.L.B. Working as an Advocate in high court. Contact Smt. Sumitra Rao Tel: 409 9656

## DISCLAIMER

We have come to know that some of our members have received a mailer from a computer training institute, in which our name is put in such a way as to give a misleading impression that the message is jointly sent by us and the said institute. We have nothing to do with that message and we have taken up the matter seriously with the concerned institute.

We wish to inform our members, that address list of the members of our Association is not divulged to any outsider as a matter of policy. This is being done to protect the members against any possible misuse. Occasionally, where we have felt that the mailing might be of interest or benefit to the members, we have extended the service of mailing the letters for the party, at their cost. The Association does not involve itself with any commercial activity of others.

We wish to reassure our members that we shall continue with the policy of not divulging the members' addresses to outsiders and protecting the interest of our members.

## ಸುತ್ತಮುತ್ತ

### ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಶಾರದಾ ಪೂಜೆ ಮತ್ತು ಹಳದಿ ಕುಂಕುಮ

ನವರಾತ್ರಿ ಹಬ್ಬದ ಅಂಗವಾಗಿ ವಡಾಲದ ರಾಷ್ಟ್ರೀಯ ಕನ್ನಡ ಶಾಲೆಯಲ್ಲಿ ಅಕ್ಟೋಬರ್ 14ರಂದು ಮಧ್ಯಾಹ್ನ 12 ಗಂಟೆಗೆ ಶ್ರೀ ಶಾರದಾ ಪೂಜೆ ಹಾಗೂ ಹಳದಿ



ಕುಂಕುಮ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮುಖ್ಯ ಅತಿಥಿಯಾಗಿ ಆಗಮಿಸಿದ ಶಾಲಾ ಹಳೆವಿದ್ಯಾರ್ಥಿ ಎಸ್.ಕೆ. ಅಯ್ಯಂಗಾರ್ ದೀಪ ಬೆಳಗಿಸುವುದರೊಂದಿಗೆ ಕಾರ್ಯಕ್ರಮವು ಆರಂಭಗೊಂಡಿತು. ತದನಂತರ ವಡಾಲದ ಲಲಿತ ಸಹಸ್ರನಾಮ ಮಂಡಳಿಯವರಿಂದ ಲಲಿತ ಸಹಸ್ರನಾಮಾರ್ಚನೆ, ದೇವಿಸ್ತೋತ್ರವು ಜರುಗಿದ ಬಳಿಕ ಮಂಗಳಾರತಿ ನಡೆಯಿತು. ನಂತರ ಹಳದಿ ಕುಂಕುಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಶಾಲೆಯ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸರೋಜಾ ರಾವರವರ ಮುಂದಾಳುತ್ವದಲ್ಲಿ ಜರುಗಿದ ದೈವಿಕ ಕಾರ್ಯಕ್ರಮಕ್ಕೆ ಶಿಕ್ಷಕ - ಶಿಕ್ಷಕೇತರ ವರ್ಗದವರು ಭಾಗವಹಿಸಿ ದೇವಿಯ ಕೃಪೆಗೆ ಪಾತ್ರರಾದರು.

ಇದೇ ಸಂದರ್ಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ 1953-54 ಶಿಕ್ಷಣಿಕ ವರ್ಷದ ಶಾಲಾ ವಿದ್ಯಾರ್ಥಿಯಾಗಿದ್ದು ಹಾಗೂ ಟಾಟಾ ಪವರಂ ಕಂಪೆನಿಯಲ್ಲಿ ಉಪಪ್ರಬಂಧಕರಾಗಿ ನಿವೃತ್ತಿ ಹೊಂದಿರುವ ಶ್ರೀ ಎಸ್.ಕೆ. ಐಯ್ಯಂಗಾರ್ ರೂಪಾಯಿ 10.000/- ರವರನ್ನು ಶಾಲೆಗೆ ದೇಣಿಗೆಯಾಗಿ ನೀಡುತ್ತಾ ವಿದ್ಯಾರ್ಥಿಗಳ ಭವ್ಯ ಭವಿಷ್ಯಕ್ಕಾಗಿ ಹಾರೈಸಿದರು. ಈ ಕಾರ್ಯಕ್ರಮದಲ್ಲಿ ಶಾಲಾ ಕಾರ್ಯಕಾರಿ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಸ್. ಸುಬ್ರಮಣಿ ಹಾಗೂ ಕೋಶಾಧಿಕಾರಿ ಶ್ರೀ ಕೆ.ಎನ್. ಕೀರ್ತಿಯವರು ಉಪಸ್ಥಿತರಿದ್ದು ಕಾರ್ಯಕ್ರಮಕ್ಕೆ ಸೂಕ್ತ ಮಾರ್ಗದರ್ಶನವಿತ್ತರು.

## 'ಸಾದಿ' ತುಳು ಕವನ ಸಂಕಲನ ಬಿಡುಗಡೆ



*'ಸಾದಿ' ತುಳು ಕವನ ಸಂಕಲನ ಬಿಡುಗಡೆ ಸಂದರ್ಭದಲ್ಲಿ ಉಪಸ್ಥಿತರಿದ್ದವರು : (ಎಡದಿಂದ ಬಲಕ್ಕೆ) ಬಿ.ಎಸ್. ಕುರ್ಕಾಲ್, ಸದಾನಂದ ಸುವರ್ಣ, ಡಾ. ಸುನೀತಿ ಉದ್ಯಾವರ, ಡಾ. ವಾಮನ ನಂದಾವರ, ಡಾ. ಸುನೀತಾ ಎಂ. ಶೆಟ್ಟಿ ಹಾಗೂ ಜೆ. ಪಿ. ಕುಸುಮಾ*

ಮುಂಬಯಿ: ಯುವ ಲೇಖಕಿ, ಕವಯಿತ್ರಿ ಜೆ.ಪಿ. ಕುಸುಮಾ ಅವರ 'ಸಾದಿ' ಎಂಬ ತುಳು ಕವನ ಸಂಕಲನವನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಡಾ। ವಾಮನ ನಂದಾವರ ಬಿಡುಗಡೆಗೊಳಿಸಿದರು.

ಕೃತಿಯನ್ನು ಪ್ರಕಟಿಸಿರುವ ಸುವರ್ಣಗಿರಿ ಪ್ರಕಾಶದ ನಿರ್ದೇಶಕ ಸದಾನಂದ ಸುವರ್ಣರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಗೋರೆಗಾಂವ್ ಕರ್ನಾಟಕ ಸಂಘದಲ್ಲಿ ಈ ಕಾರ್ಯಕ್ರಮ ಜರಗಿತು.

ಕವಿ, ಪತ್ರುಪುಷ್ಪ ಮಾಸಿಕದ ಮಾಜಿ ಸಂಪಾದಕರಾದ ಬಿ.ಎಸ್. ಕುರ್ಕಾಲ್ ಕೃತಿ ಪರಿಚಯ ಮಾಡಿದರು. ಜೆ.ಪಿ. ಕುಸುಮಾ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಲೇಖಕ ಶಿಮುಂಜೆ ಪರಾರಿಯವರು ಕಾರ್ಯಕ್ರಮ ನಿರೂಪಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷೆ ಡಾ। ಸುನೀತಿ ಉದ್ಯಾವರ ಮತ್ತು ಕವಿಯತ್ರಿ, ಲೇಖಕಿ ಡಾ। ಸುನೀತಾ ಶೆಟ್ಟಿಯವರು ಉಪಸ್ಥಿತರಿದ್ದರು.

### 'ಕಲಾ ಭಾರತಿ' ಅಭೂತಪೂರ್ವ ಶ್ರದ್ಧಾಂಜಲಿ ಕಾರ್ಯಕ್ರಮ

'ಸುಧೀರ ಫಡಕೆ' ಮರಾಠಿ ಮತ್ತು ಹಿಂದಿ ಚಲನಚಿತ್ರ ಸಂಗೀತದ ಒಬ್ಬ ಪ್ರಸಿದ್ಧ ದಿಗ್ದರ್ಶಕ ಮತ್ತು ಹಾಡುಗಾರ. ಇಷ್ಟೇ ಅಲ್ಲ. ಇತ್ತೀಚೆಗೆ 'ವೀರ ಸಾವರಕರ' ಚಲನಚಿತ್ರವನ್ನೂ ಅನೇಕ ವಿಘ್ನಗಳು ಬಂದರೂ ಪೂರ್ಣ ಮಾಡಿ ಇದೇ ತಿಂಗಳ ಮೊದಲು 84 ವರ್ಷ ವಯಸ್ಸಿನಲ್ಲಿ 29 ಜುಲೈ ತಿಂಗಳಲ್ಲಿ ತೀರಿಕೊಂಡರು. ಅವರ ನೆನಪಿಗಾಗಿ ಅದೇ ದಿನ ಅಂದರೆ 29 ಸೆಪ್ಟೆಂಬರ್ ತಿಂಗಳಂದು ಕಲಾಭಾರತಿ ಸ್ನೇಹಾಂಜಲಿಯವರೊಂದಿಗೆ ಕೂಡಿ ಒಂದು ಅಭೂತ ಪೂರ್ವ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಗಾಯತ್ರಿ ಮಂತ್ರೋಚ್ಛಾರದಿಂದ ಕಾರ್ಯಕ್ರಮವನ್ನು ಆರಂಭ ಮಾಡಲಾಯ್ತು. 'ಜಗಚಾ ಪಾಠಿವರ್' ಈ ಚಿತ್ರಪಟದ 'ವಿಕತ್ ಘೇತಲಾ ಶ್ಯಾಂ' ಈ ಪದ್ಯವನ್ನು ಹಾಡಿದ ಸ್ನೇಹಲ್ ಜೋಶಿ ಮತ್ತು ಮಿಲಿಂದ ಜೋಗ್ ರಸಿಕರನ್ನು ಮರಾಠಿ ಚಿತ್ರ ಪಟ ಸೃಷ್ಟಿಯ ಸುವರ್ಣ ಕಾಲಕ್ಕೆ ಒಯ್ದರು. ಜ್ಯೋತಿ ಕಲಶ ಛಲಕೆ' ಈ ಹಿಂದೆ ಪದ್ಯವನ್ನು ಆರತಿ ಕೇಳ್ಕರ್ ತುಂಬ ತಯಾರಿಯಿಂದ ಸುಶ್ರಾವ್ಯವಾಗಿ ಹಾಡಿದರು. ಹಾಗೆಯೇ 'ಉಠಾ ರಾಷ್ಟ್ರವೀರ ಹೋ' ಎಂಬ ರಾಷ್ಟ್ರಗೀತೆಯನ್ನು ಅತ್ಯಂತ ಸ್ಫೂರ್ತಿಯಿಂದ ಕು. ಅವನಿ ಮತ್ತು ಆರ್ಯ ಘಾಟಕ್ ಇಬ್ಬರು ಪುಟ್ಟಾಣಿ ಗಾಯಕಿಯರು ಹಾಡಿ ಇಡೀ ವಾತಾವರಣವನ್ನೇ ಮರುಳುಗೊಳಿಸಿದರು. ಪ್ರೇಮಗೀತೆ, ಭಕ್ತಿಗೀತೆ, ಶೃಂಗಾರಿಕ ಗೀತೆ, ಲೋಕ ಗೀತೆ ಹಾಗೆ ಬೇರೆ ಬೇರೆ ಗೀತಾ ಪ್ರಕಾರಗಳನ್ನು ಆಯ್ದು ಬಾಬೂಜಿಯ 'ಅಷ್ಟಪೈಲೂ' ವ್ಯಕ್ತಿಮತ್ವವನ್ನು ಪ್ರಭಾವಾತ್ಮಕವಾಗಿ ರಸಿಕರೆದುರು ಮಂಡಿಸಿದರು ಹಾಗೆಯೇ ಸ್ವಾತಂತ್ರ್ಯ ವೀರ ಸಾವರ್‌ಕರ್ ರವರ 'ಸಾಗರ ಪ್ರಾಣ ತಳಮಳಲಾ' ಈ ಗೀತೆಯನ್ನು ಅದರ ಮೂಲ ರಾಗದಿಂದ ಹಾಡಿ ಸ್ನೇಹಲ್ ಮತ್ತು ಆರತಿ ಈ ನವಗಾಯಕಿಯರು ಕಾರ್ಯಕ್ರಮಕ್ಕೆ ಕಳಶವನ್ನೇ ಏರಿಸಿದರು.

ಈ ಕಾರ್ಯಕ್ರಮದಲ್ಲಿ ಪ್ರಖ್ಯಾತ ಸಂಗೀತಗಾರ ಶ್ರೀ ಪ್ರಭಾಕರ್ ಜೋಗ್ ಮತ್ತು ಮತ್ತು ಶ್ರೀ ಪ್ರಭಾಕರ್ ಪಂಡಿತ ಉಪಸ್ಥಿತರಿದ್ದು ಕೈಲಾಸವಾಸಿ ಸುಧೀರ್ ಫಡ್‌ಕೆಯವರ ಮಧುರ ನೆನಪುಗಳನ್ನು ಸ್ಮರಿಸಿದರು. ಬಾಬೂಜಿಯವರ ಸಂಗೀತದಲ್ಲಿದ್ದ ವಿಶೇಷತೆಯನ್ನು 'ಕಲಾ ಭಾರತಿ'ಯ ಕಾರ್ಯಕ್ರಮದಲ್ಲಿ ಸ್ನೇಹಾಂಜಲಿಯವರು ಯಶಸ್ವಿಯಾಗಿ ತೋರಿಸಿದರು.

### ಬಿ.ಎ. ಸನದಿಯವರಿಗೆ ಅಂತರಾಷ್ಟ್ರೀಯ ಮನ್ನಣೆ

ಹೆಸರಾಂತ ಕನ್ನಡ ಕವಿಗಳಾದ ಶ್ರೀ ಬಿ. ಎ. ಸನದಿಯವರ ಇಂಗ್ಲೀಷ್ ಕವನಗಳ ಮೊದಲ ಸಂಕಲನ ''ಥರ್ಸ್ಟೀ ವರ್ಡ್''ನಲ್ಲಿರುವ ಕವನಗಳನ್ನು ಗಮನಿಸಿ ಅಮೇರಿಕೆಯ ಇಂಟರ್‌ನ್ಯಾಶನಲ್ ಸೊಸೈಟಿ ಆಫ್ ಪೋಯೆಟ್ಸ್ ಸಂಸ್ಥೆಯವರು ಸನದಿಯವರನ್ನು ''ಇಂಟರ್ ನ್ಯಾಶನಲ್ ಪೋಯೆಟ್ ಆಫ್ ಮೆರಿಟ್ 2002'' ಪ್ರಶಸ್ತಿಗಾಗಿ ಮಾಡಿದ್ದಾರೆ. 1990ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ ಪ್ರತೀ ವರ್ಷವೂ ಬೇರೆ ಬೇರೆ ದೇಶಗಳಿಂದ ಪ್ರತಿಭಾವಂತ ಕವಿಗಳನ್ನಾಯ್ದು ವಾರ್ಷಿಕ ಪ್ರಶಸ್ತಿ - ಪುರಸ್ಕಾರಗಳನ್ನು ನೀಡುತ್ತಾ ಬಂದಿದೆ. ತಮ್ಮ ಕಾವ್ಯ ಸಾಧನೆಯ ಮೂಲಕ ವಿಶ್ವಶಾಂತಿಗೆ ಸೇವೆ ಸಲ್ಲಿಸುತ್ತಿರುವ ಪ್ರತಿಭೆಗಳನ್ನು ಗುರುತಿಸಿ ಗೌರವಿಸುವ ಉದ್ದೇಶದಿಂದ ಈ ಸಂಸ್ಥೆಯು ಪ್ರತೀ ವರ್ಷ ಅಂತರಾಷ್ಟ್ರೀಯ ಮಟ್ಟದಲ್ಲಿ ಕಾವ್ಯೋತ್ಸವ ನಡೆಸುತ್ತದೆ. ಈ ವರ್ಷದ ನವೆಂಬರ್ '15ರಿಂದ 17ರ, ವರೆಗೆ ಕ್ಯಾಲಿಫೋರ್ನಿಯಾದಲ್ಲಿರುವ ಹಾಲಿವುಡ್‌ನಲ್ಲಿ ಹಮ್ಮಿಕೊಂಡಿರುವ ಅಂತರಾಷ್ಟ್ರೀಯ ಕಾವ್ಯ ಸಮಾವೇಶದಲ್ಲಿ ಈ ವರ್ಷದ ಪ್ರಶಸ್ತಿ ಪ್ರಧಾನ ಸಮಾರಂಭವೂ ನಡೆಯಲಿದೆ. ಇದೇ ವರ್ಷ ಅಮೇರಿಕನ್ ಬಯೋಗ್ರಾಫಿಕಲ್ ಇನ್‌ಸ್ಟಿಟ್ಯೂಟ್‌ನವರೂ ಶ್ರೀ ಸನದಿಯವರನ್ನು ತಮ್ಮ ''ಅಮೇರಿಕನ್ ಮೆಡಲ್ ಆಫ್ ಆನರ್'' ಸ್ವರ್ಣ ಪದಕ ಪುರಸ್ಕಾರಕ್ಕಾಗಿ ನಾಮಕರಣ ಮಾಡಿದ್ದಾರೆ.

ಈ ವಿಶೇಷ ಗೌರವಕ್ಕೆ ಪಾತ್ರರಾದ ಶ್ರೀ ಸನದಿಯವರನ್ನು ನೇಸರು ಅಭಿನಂದಿಸುತ್ತದೆ.

### ಭೌಗೋಳಿಕವಾಗಿ ಬೇರೆ ಪ್ರಾಂತ್ಯದಲ್ಲಿದ್ದರೂ ನಾವೆಲ್ಲರೂ ಒಂದೇ : ಅಜಿತ್ ದೇಶ್‌ಪಾಂಡೆ

ಮುಂಬಯಿ : ಕನ್ನಡ ಭಾಷೆ ಸಂಸ್ಕೃತಿ ಅಭಿವೃದ್ಧಿಗೆ ಕನ್ನಡಿಗರು ಮುಂಬಯಿಯಲ್ಲಿದ್ದು ಮಾಡುವ ಕೆಲಸ ಅಭಿನಂದನೀಯ. ಕರ್ನಾಟಕ ಮತ್ತು ಮಹಾರಾಷ್ಟ್ರ ಭೌಗೋಳಿಕವಾಗಿ ಬೇರೆ ಬೇರೆ ಪ್ರಾಂತ್ಯವಾಗಿದ್ದರೂ ನಾವೆಲ್ಲರೂ ಒಂದೇ ಆಗಿದ್ದೇವೆ ಎಂದು ಮುಂಬಯಿ ಮಹಾನಗರ ಪಾಲಿಕೆಯ ಶಿಕ್ಷಣಾಧಿಕಾರಿ ಶ್ರೀ ಅಜಿತ್‌ದೇಶ್‌ಪಾಂಡೆ ನುಡಿದರು. ಅವರು ಕರ್ನಾಟಕ ಸಂಘ, ಮುಂಬಯಿ ಇತ್ತೀಚೆಗೆ ಆಯೋಜಿಸಿದ ಶಾಲಾಮಕ್ಕಳ ಸಮವಸ್ತ್ರ ವಿತರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿ ಸ್ಥಾನದಿಂದ ಮಾತನಾಡುತ್ತಿದ್ದರು. ಶ್ರೀಯುತರು ಮುಂದುವರಿಯುತ್ತಾ ಮಹಾನಗರ ಪಾಲಿಕೆಯು ವಿದ್ಯಾರ್ಥಿಗಳಿಗೆ ಉಚಿತ ವಿದ್ಯೆ ನೀಡುವ ಕೆಲಸ ಮಾಡಿದರೆ ಸಂಘವು ಉಚಿತ ಸಮವಸ್ತ್ರ ನೀಡಿ ಪ್ರೋತ್ಸಾಹಿಸುವುದು ಶ್ಲಾಘನೀಯ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದ ಅಧ್ಯಕ್ಷ ಸ್ಥಾನ ವಹಿಸಿದ ಸಂಘದ ಅಧ್ಯಕ್ಷ ರವಿ ರಾ. ಅಂಚನ್ ಪ್ರತೀ ವರ್ಷದಂತೆ ಈ ವರ್ಷವೂ ಸಂಘವು ವಿದ್ಯಾರ್ಥಿಗಳಿಗೆ ಸಮವಸ್ತ್ರ ನೀಡಿದೆ. ಈ ವರ್ಷದ ವೈಶಿಷ್ಟ್ಯವೆಂದರೆ ನಾವು ವಿದ್ಯಾರ್ಥಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸಿದ್ದೇವೆ. ಬಡತನವೆಂದು ಕುಗ್ಗದೆ ಅದನ್ನು ಸವಾಲೆಂದು ಸ್ವೀಕರಿಸಿ ಮುಂದಿನ ದೃಢ ಹೆಜ್ಜೆಯನ್ನು ಇಡುವ ಚೈತನ್ಯ ಎಲ್ಲಾ ಮಾತಾಪಿತರಲ್ಲಿ ಬರಬೇಕು. ಮಕ್ಕಳ ವಿದ್ಯಾಭ್ಯಾಸ ಕೇವಲ ಪ್ರಾಥಮಿಕಕ್ಕೆ ಸೀಮಿತಗೊಳಿಸದೆ ಉಚ್ಚಶಿಕ್ಷಣ ಪಡೆಯುವಂತಾಗಬೇಕೆಂಬುದೇ ನಮ್ಮ ಆಶಯ ಎಂದು ನುಡಿದರು.

ಮುಖ್ಯ ಅತಿಥಿಯ ಹಸ್ತದಿಂದ ಸುಮಾರು 900 ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮಾಡಲಾಯಿತು. ವೇದಿಕೆಯಲ್ಲಿ ಸಂಘದ ಗೌರವ ಕಾರ್ಯದರ್ಶಿ ಭರತ್‌ಕುಮಾರ್ ಪೊಲಿಪು ಹಾಗೂ ಸಾಹಿತ್ಯ ಭಾರತಿಯ ಸಂಯೋಜಕರಾದ ಡಾ. ಜಿ.ಡಿ. ಜೋಶಿಯವರು ಉಪಸ್ಥಿತರಿದ್ದರು.

Regn. No. 040155/83
Regn. No. TECH/47-202/MBI-2002
Date of Posting : 10-11-2002



## FORTHCOMING PROGRAMMES

| Date | Programme | Venue | Time |
|---|---|---|---|
| Saturday, the 16th November 2002 | **The Mysore Association, Bombay & Udayan**<br>***Jointly present***<br>**"SHE"**<br>A Dance Drama<br>By<br>**Nina Rajarani, Pali Chandra and Troupe**<br>*from London*<br>*Music scored by* **G. S. Rajan**<br>**Shankar Mahadevan & Shivamani**<br>Nina Rajarani and Pali Chandra run their own schools in U.K. with Nina specializing in Bharathanatyam and Pali in Kathak. G. S. Rajan is one of the outstanding flute players and a good composer of music. Shankar Mahadevan and Shivamani are well known names in the music circles.<br>"She" consists of two parts. Yagna and Kamoshi Ki Awaaz. Yagna presents a woman's capacity to accomplish the impossible, with the acquired powers of the resolute modern women. Kamoshi Ki Awaaz is an abstract piece on the artists interpretation of silence. Every sound created can be interpreted by an individual based on their personal emotional experience. It highlights the rhythmic complexities. | The Mysore Association, Auditorium | 6.30 p.m. |
| Monday, the 25th November 2002 | **The Mysore Association, Bombay and**<br>**The Dept. of Kannada, Mumbai University**<br>Present<br>The release of Dr. B. R. Manjunath's<br>**Two Kannada Plays**<br>**"Bisilgudure"** &<br>**"Nadyavrannodbeku"**<br>**Dr. Vyasarao Ninjoor**<br>will Preside<br>**Dr. Taltaje Vasanth Kumar, Sri Dhundiraj**<br>And<br>**Sri Bharath Kumar Polipu**<br>*Will speak on the plays.*<br>The Fine Art Troupe of the Mysore Association will Present the Songs from these plays. | The Mysore Association, Conference Hall | 7.00 p.m. |

## CULTURAL AND SPORTS FESTIVAL 2001-2002

**TO BE HELD ON THE 21ST AND 22ND DEC - 2002.**

**TALENTS' DAY - 21-12-02 AT 4.00 P.M.**

**Events:**

a) **Below 5 years.**
 1) Fancy Dress
 2) Shloka

b) **5 to 8 years**
 1) Drawing
 2) Fancy Dress
 3) Action Songs

c) **9 to 12 years**
 1) Drawing
 2) Songs in Kannada
 3) Film Songs

d) **13 to 18 years**
 1) Drawing
 2) Pick-N-Speak
 3) Songs in Kannada

e) **19 to 25 years**
 1) Flower Arrangement
 2) Pick-N-Speak
 3) Bhavageete in Kannada

### SPORTS DAY

**22-12-2002**

**Time - 10 a.m.**

Venue - N.K.E.S. Grounds

a) **Below 5 years**
 1) Running Race
 2) Hit a Target

b) **6 to 9 years**
 1) Running Race
 2) Hit A Target
 3) Book Balancing

c) **10 to 15 years**
 1) Potato Race
 2) Running Race
 3) Lemon and Spoon

d) **16 to 25 years**
 1) Running Race
 2) Shot Put
 3) Aiming the Wicket

c) **26 to 40 years**
 1) Threading the needle
 2) Shot Put
 3) Book Balancing

f) **Above 40 Years**
 1) Brisk Walking
 2) Lemon and Spoon
 3) Shot Put

Musical Chair is common Event between 26 to 40 & above 40

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38